**Shivamogga, Davanagere and Chitradurga District Co-operative Milk Producer's Societies Union Ltd.,**

**Machenahalli, Nidige Post,**

**SHIVAMOGGA - 577222**

SHORT TERM TENDER (TWO COVER SYSTEM) FOR

# PROVIDING OPERATION AND MAINTENANCE CONTRACT OF E.T.P. UNITS AT SHIVAMOGGA, DAVANAGERE DAIRY AND HONNALLI, THADAGANI AND CHITRADURGA MILK CHILLING CENTRES FOR A PERIOD OF TWO YEARS (2ND CALL)

## PART – I (TECHNICAL TENDER)

Telephone : 08182-246161/163

Fax : 0882-246284

e-mail: shimulengg@gmail.com

ಟೆಂಡರುದಾರರ ಸಹಿ ಮತ್ತು ಮೊಹರು

**SHIVAMOGGA, DAVANAGERE AND CHITRADURGA DIST. CO-OPERATIVE MILK PRODUCERS' SOCIETIES UNION LTD., MACHENHALLI, NIDIGE (P) – 577222 SHIVAMOGGA DIST**

e-mail:md_shimul@yahoo.com,shimulengg@gmail.com Tele:08182 – 246161/63

## SHORT TERM TENDER

# Technical Tender Part - I

KMF/2024-25/SE3303/CALL-2

**IFT NO: ಸಂಖ್ಯೆ:ಶಿದಾಚಿಸಹಾಒ:ಅಭಿಯಂತರ:188:2025-26 ದಿನಾಂಕ:** 09.04.2025

| | | | |
|---|---|---|---|
| 01. | Whether the Tender document is in accordance with G.O. No: FD 9 PCL 2004 (I) (II) (III) dated: 06-08-2005 issued by Finance Department | : | Yes |
| 02. | Whether it is short-term tender, if so the reasons | : | No |
| 03. | Whether approval of Board / Commissioner / Director has been obtained for long-term Tender | : | Yes |
| 04. | Approximate amount of Tender | : | **Rs. 100.00 Lakhs** |
| 05. | Availability of e-Tender | : | 09.04.2025 |
| 06. | Last Date of submission of Tenders/Quoting | : | **17.04.2025** upto 16.30 pm |
| 07. | Opening of Technical Tender (Part-I) | : | **19.04.2025** 11.30 am on wards |
| 08. | Opening of Commercial Tender (Par-II) | : | **21.04.2025** 11.30 am on wards |
| 09. | Place of opening of Technical & Commercial Tender | : | Board Room<br>Shivamogga Milk Union Ltd., |

ಟೆಂಡರುದಾರರ ಸಹಿ ಮತ್ತು ಮೊಹರು

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮಾಚೇನಹಳ್ಳಿ, ನಿಧಿಗೆ ಅಂಚೆ, ಶಿವಮೊಗ್ಗ – 577 222

**IFT NO:** ಸಂಖ್ಯೆ:ಶಿದಾಚಿಸಹಾಒ:ಅಭಿಯಂತರ: 188:**2025-26** **Date :** **09.04.2025**

**KMF/2024-25/SE3303/CALL-2**

**ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ(ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಮಾತ್ರ)**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವ್ಯಾಪ್ತಿಯಲ್ಲಿನ ಇ.ಟಿ.ಪಿ ಘಟಕಗಳನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಚಾಲನೆ ಮತ್ತು ನಿರ್ವಹಣೆಯನ್ನು ಈ ಕೆಳಕಾಣಿಸಿದ ಕೋಷ್ಟಕದಂತೆ ಟೆಂಡರ್ ಆಹ್ವಾನಿಸಿದ್ದು, ಆಸಕ್ತ ಗುತ್ತಿಗೆದಾರರು ಟೆಂಡರ್ ಬಿಡ್‌ಗಳನ್ನು ನಿಗದಿತ ಇ.ಎಂ.ಡಿ ಮೊತ್ತದೊಂದಿಗೆ ದಿನಾಂಕ: 17.04.2025 ರ ಸಂಜೆ 16.30 ಗಂಟೆಗಳ ಒಳಗಾಗಿ ಇ-ಪ್ರೋಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಛೇರಿ ಮತ್ತು ಅಭಿಯಂತರ ವಿಭಾಗವನ್ನು ಸಂಪರ್ಕಿಸಬಹುದಾಗಿದೆ.

| ಕ್ರ. ಸಂ. | ಕೆಲಸದ ವಿವರ | ಇಂಡೆಟ್ ಸಂಖ್ಯೆ | ಟೆಂಡರ್‌ನ ಅಂದಾಜು ಮೊತ್ತ | ಟೆಂಡರ್‌ನ ಅವಧಿ | ಇ.ಎಂ.ಡಿ ಮೊತ್ತ |
|---|---|---|---|---|---|
| 1 | ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಹೊನ್ನಾಳಿ, ತಡಗಣಿ ಮತ್ತು ಚಿತ್ರದುರ್ಗ ಶೀತಲೀಕರಣ ಕೇಂದ್ರಗಳಲ್ಲಿರುವ ಇ.ಟಿ.ಪಿ. ಘಟಕಗಳನ್ನು ದ್ವೈ ವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಚಾಲನೆ ಮತ್ತು ನಿರ್ವಹಣೆ (ದ್ವಿ ಲಕೋಟೆ) (**2ನೇ ಕರೆ**) | IFTNO:SDCMUL/ENGG/ETP/AMC/ 2025-26 | ರೂ. 100 ಲಕ್ಷ | 02 ವರ್ಷಗಳು | ರೂ. 2,50,000/- |

ಸಹಿ/-
**ವ್ಯವಸ್ಥಾಪಕ ನಿರ್ದೇಶಕರು**
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ
ಶಿವಮೊಗ್ಗ

**ಟೆಂಡರುದಾರರ ಸಹಿ ಮತ್ತು ಮೊಹರು**

## ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಅರ್ಜಿ

**ಯಿಂದ:**
--------------------------------
--------------------------------
--------------------------------

**ಗೆ:**
**ವ್ಯವಸ್ಥಾಪಕ ನಿರ್ದೇಶಕರು,**
**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ**
**ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,**
**ಮಾಚೇನಹಳ್ಳಿ, ನಿಧಿಗೆ (ಅಂಚೆ), ಶಿವಮೊಗ್ಗ ಜಿಲ್ಲೆ.**

ಮಾನ್ಯರೆ,

ವಿಷಯ: ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ ಮತ್ತು ಹೊನ್ನಾಳಿ, ತಡಗಣಿ ಹಾಗೂ ಚಿತ್ರದುರ್ಗ ಶೀತಲೀಕರಣ ಕೇಂದ್ರಗಳ ತ್ಯಾಜ್ಯ ನೀರು ಸಂಸ್ಕರಣಾ ಘಟಕದ (ETP) ಚಾಲನೆ ಮತ್ತು ನಿರ್ವಹಣೆಯ ಕೆಲಸಗಳಿಗೆ ಸಂಬಂಧಿಸಿದಂತೆ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ದ್ವೈವಾರ್ಷಿಕ ಅವಧಿಗೆ ಗುತ್ತಿಗೆದಾರರಿಂದ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರಿಗೆ ಟೆಂಡರು ದಸ್ತಾವೇಜುಗಳನ್ನು ಸಲ್ಲಿಸುವ ಬಗ್ಗೆ. **(2ನೇ ಕರೆ)**

ಉಲ್ಲೇಖ : **IFT NO: ಸಂಖ್ಯೆ:ಶಿದಾಚಿಸಹಾಒ:ಅಭಿಯಂತರ: 188 : 2025-26 ದಿನಾಂಕ: 09.04.2025**

**********

ಟೆಂಡರು ಪ್ರಕಟಣೆಯ ಅನುಸಾರ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರುಗಳನ್ನೊಳಗೊಂಡ ದಸ್ತಾವೇಜನ್ನು ಪರಿಶೀಲಿಸಿ ಸದರಿ ದಸ್ತಾವೇಜುನಲ್ಲಿರುವ ಷರತ್ತುಗಳಿಗೆ ಸಮ್ಮತಿಸಿ ನಾನು / ನಾವು ಟೆಂಡರಿಗೆ ಸಂಬಂಧಿಸಿದ ಅವಶ್ಯವಿರುವ ಎಲ್ಲಾ ದಾಖಲಾತಿಗಳನ್ನು ಮತ್ತು ಮಾಹಿತಿಯನ್ನು ಈ ಮೂಲಕ ಸಲ್ಲಿಸುತ್ತಿದ್ದೇವೆ. ತಾಂತ್ರಿಕ ಮತ್ತು ವಾಣಿಜ್ಯ ಟೆಂಡರು ಸಲ್ಲಿಸಲು ಅಧಿಕೃತಗೊಂಡ ನಾನು ಮೆ: ________________ಇವರ ಪರವಾಗಿ ______________________________ _______ಸಾಮರ್ಥ್ಯದಲ್ಲಿ ಈ ಟೆಂಡರು ಅರ್ಜಿಯನ್ನು ಸಲ್ಲಿಸುತ್ತಿದ್ದೇನೆ. ಸಂಸ್ಥೆಯ ಪರವಾಗಿ ಟೆಂಡರು ಸಲ್ಲಿಸಲು ನನಗೆ ಅಧಿಕಾರವನ್ನು ನಿಯೋಜಿಸಿದ ಬಗ್ಗೆ ಕಾನೂನು ಸಮ್ಮತವಾದ ಅವಶ್ಯಕ ಸಾಕ್ಷ್ಯವನ್ನು ಇದರೊಂದಿಗೆ ಲಗತ್ತಿಸಿದೆ.

ತಾಂತ್ರಿಕ ಮತ್ತು ವಾಣಿಜ್ಯ ಟೆಂಡರಿನಲ್ಲಿ ನಮೂದಿಸಲಾಗಿರುವ ಎಲ್ಲಾ ಸೂಚನೆಗಳು, ನಿಬಂಧನೆ ಹಾಗೂ ಷರತ್ತುಗಳಿಗೆ ಬದ್ದನಾಗಿರುತ್ತೇನೆ/ ಬದ್ದರಾಗಿರುತ್ತೇವೆ.

ಯಾವುದೇ ಕಾರಣಗಳನ್ನು ನೀಡದೆ ಟೆಂಡರನ್ನು ತಿರಸ್ಕರಿಸುವ ಹಕ್ಕನ್ನು ಟೆಂಡರು ಅಂಗೀಕರಿಸುವ ಪ್ರಾಧಿಕಾರ / ಸಮಿತಿ ಹೊಂದಿರುತ್ತದೆ ಎಂದು ನಾನು ತಿಳಿದಿರುತ್ತೇನೆ / ನಾವು ತಿಳಿದಿರುತ್ತೇವೆ. ಟೆಂಡರಿನಲ್ಲಿ ನಮೂದಿಸಿರುವ ದರವು ಟೆಂಡರ್ ತೆರೆಯುವ ದಿನಾಂಕದಿಂದ 90 ದಿನಗಳ ಅವಧಿಯವರೆಗೆ ಅಂಗೀಕರಿಸಲು ಸಿಂಧುವಾಗಿರುತ್ತದೆ. ಎಂದು ನಾನು ಒಪ್ಪಿರುತ್ತೇನೆ / ನಾವು ಒಪ್ಪಿರುತ್ತೇವೆ. ಟೆಂಡರು ಪ್ರಕ್ರಿಯೆಯ ಸಮಯದಲ್ಲಿ ಮತ್ತು ಗುತ್ತಿಗೆ ಅವಧಿಯಲ್ಲಿ ಶಿಸ್ತು ಮತ್ತು ಗೌರವದಿಂದ ವರ್ತಿಸುವುದಾಗಿ ಹಾಗೂ ನಮೂದಿಸಿದ ದರಗಳಿಗೆ ಅವಶ್ಯಕ ಮಾನವ ಸಂಪನ್ಮೂಲಗಳನ್ನು ಬೇಡಿಕೆ ಪ್ರಕಾರ ಒದಗಿಸಲು ಬದ್ದನಾಗಿರುವುದಾಗಿ ನಾನು ಒಪ್ಪಿರುತ್ತೇನೆ / ನಾವು ಒಪ್ಪಿರುತ್ತೇವೆ.

**ಅಡಕ:**

1. ಅಧಿಕಾರವನ್ನು ನಿಯೋಜಿಸಿದ ಬಗ್ಗೆ ಸಾಕ್ಷ್ಯ
2. ಇತ್ತೀಚಿನ ಸಂಸ್ಥೆ/ ಬ್ರೋಚರ್ ಇದ್ದಲ್ಲಿ

**ಟೆಂಡರುದಾರರ ಸಹಿ ಮತ್ತು ಮೊಹರು**

# ತಾಂತ್ರಿಕ ಮತ್ತು ವಾಣಿಜ್ಯ ಟೆಂಡರಿನ ಷರತ್ತು ಮತ್ತು ನಿಬಂಧನೆಗಳು :

## 1.0 ತಾಂತ್ರಿಕ ಮತ್ತು ವಾಣಿಜ್ಯ ಟೆಂಡರು ಆಹ್ವಾನಿಸಿರುವುದು :

1.1. ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಮುಖ್ಯ ಡೇರಿ, ದಾವಣಗೆರೆ ಡೇರಿ ಮತ್ತು ಹೊನ್ನಾಳಿ, ತಡಗಣಿ ಹಾಗೂ ಚಿತ್ರದುರ್ಗ ಶೀತಲೀಕರಣ ಕೇಂದ್ರದ ತ್ಯಾಜ್ಯ ನೀರು ಸಂಸ್ಕರಣಾ ಘಟಕದ (ETP) ಚಾಲನೆ ಮತ್ತು ನಿರ್ವಹಣೆಯ ಕೆಲಸಗಳಿಗೆ ಸಂಬಂಧಿಸಿದಂತೆ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ದ್ವೈವಾರ್ಷಿಕ ಅವಧಿಗೆ ಗುತ್ತಿಗೆದಾರರಿಂದ ತಾಂತಿಕ ಮತ್ತು ವಾಣಿಜ್ಯ ಟೆಂಡರಿಗೆ ಟೆಂಡರು ದಸ್ತಾವೇಜುಗಳನ್ನು ಸಲ್ಲಿಸುವ ಕೆಲಸಗಳಿಗೆ ಗುತ್ತಿಗೆ ಪಡೆಯಲು ಈ ಕೆಳಕಂಡ ಅರ್ಹತೆಗಳೊಂದಿಗೆ (ತಾಂತ್ರಿಕ ಭಾಗ–1 ಮತ್ತು ವಾಣಿಜ್ಯ ಭಾಗ–2) ಆಸಕ್ತಿಯುಳ್ಳ ಗುತ್ತಿಗೆದಾರರು ಅಥವಾ ಸಂಸ್ಥೆಗಳಿಂದ ಟೆಂಡರುಗಳನ್ನು e-procurement portal ಮೂಲಕ ಆಹ್ವಾನಿಸಲಾಗಿದೆ.

## 2.0. ಟೆಂಡರುದಾರರ ಕಡ್ಡಾಯ ಅರ್ಹತೆಗಳು:–

**ಕೆಳಗಿನ ನಿಬಂಧನೆಗಳನ್ನು ಪೂರೈಸಿದವರು ಮಾತ್ರ ಟೆಂಡರಿನಲ್ಲಿ ಭಾಗವಹಿಸಬಹುದಾಗಿದೆ:**

2.1 ಒಕ್ಕೂಟದ ಆಡಳಿತ ಮಂಡಳಿ ನಿರ್ದೇಶಕರು ಮತ್ತು ಒಕ್ಕೂಟದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು/ಉದ್ಯೋಗಿಗಳು ಅಥವಾ ಅವರ ಕುಟುಂಬದ ಸದಸ್ಯರು ಟೆಂಡರಿನಲ್ಲಿ ಭಾಗವಹಿಸಲು ಅರ್ಹರಲ್ಲ.

2.2 ಟೆಂಡರ್‌ದಾರರು ಭವಿಷ್ಯ ನಿಧಿ, ಇ.ಎಸ್.ಐ, ಜಿ.ಎಸ್.ಟಿ. ನಂಬರ್, ನೊಂದಣಿ ಪ್ರಮಾಣ ಪತ್ರಗಳು ಮತ್ತು ಆದಾಯ ತೆರಿಗೆ ಇಲಾಖೆಯಿಂದ ಪಡೆದ ಪಾನ್ ಕಾರ್ಡ್‌ನ್ನು ಹಾಗೂ ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ದೃಢೀಕರಿಸಿ ಲಗತ್ತಿಸಬೇಕು.

2.3 ಟೆಂಡರ್‌ದಾರರು 2022–23 ಮತ್ತು 2023–24ನೇ ಸಾಲಿನಲ್ಲಿ ಭವಿಷ್ಯ ನಿಧಿ ಮತ್ತು ಇ.ಎಸ್.ಐ. ಪಾವತಿಗೆ ಸಂಬಂಧಿಸಿದಂತೆ ವಂತಿಗೆಯನ್ನು ನಿಯತವಾಗಿ ಸಕ್ಷಮಪ್ರಾಧಿಕಾರಕ್ಕೆ ಪಾವತಿಸಿರಬೇಕು, ಇದಕ್ಕೆ ಸಂಬಂಧಿಸಿದಂತೆ ಇ.ಎಸ್.ಐ. ಮತ್ತು ಭವಿಷ್ಯ ನಿಧಿ ಕಚೇರಿಯಿಂದ 2022–23 ಮತ್ತು 2023–24ನೇ ಸಾಲಿನ ಎರಡು ವರ್ಷಗಳ ವಂತಿಗೆ ಬಾಬ್ತು ಪಾವತಿಸಿರುವ ಬಗ್ಗೆ ಪಾವತಿ ಚಲನ್ (Paid Challans) ಪ್ರತಿಗಳನ್ನು ಲಗತ್ತಿಸಿಬೇಕು.

2.4 ಗುತ್ತಿಗೆದಾರರು ಕರ್ನಾಟಕ ಅಂಗಡಿಗಳ ಮತ್ತು ವ್ಯಾಣಿಜ್ಯ ಸಂಸ್ಥೆಗಳ ಕಾಯಿದೆ 1961, ಹಾಗೂ ಕರ್ನಾಟಕ ಲೇಬರ್ ಕಾಂಟ್ರಾಕ್ಟ್ ಮತ್ತು ಅಬಾಲಿಷನ್ ಆಫ್ ಲೇಬರ್ ಕಾಂಟ್ರಾಕ್ಟ್ ಕಾಯಿದೆ ಪ್ರಕಾರ ನೊಂದಾಯಿಸಲ್ಪಟ್ಟಿದ್ದು, ಚಾಲ್ತಿಯಲ್ಲಿರುವ ಪ್ರಮಾಣ ಪತ್ರ ಪಡೆದು (Registration Certificate of Establishment Copy Form-c) ಪ್ರತಿ ಲಗತ್ತಿಸಿರಬೇಕು.

2.5 ಕರ್ನಾಟಕ ಕಾರ್ಮಿಕ ಇಲಾಖೆಯಿಂದ 2022–23 ಮತ್ತು 2023–24ನೇ ಸಾಲಿನಲ್ಲಿ ಪಡೆದಿರುವ Form-6 ಅನ್ನು ಲಗತ್ತಿಸಿರಬೇಕು.

2.6 ಟೆಂಡರ್‌ದಾರರು ತ್ಯಾಜ್ಯ ನೀರು ಸಂಸ್ಕರಣಾ ಘಟಕದ (ETP) ಚಾಲನೆ ಮತ್ತು ನಿರ್ವಹಣೆಯ ಕೆಲಸದಲ್ಲಿ ಪ್ರತಿ ದಿನ ಕನಿಷ್ಠ 4.0 ಲಕ್ಷ ಲೀಟರ್ ಸಾಮರ್ಥ್ಯ ಹೊಂದಿರುವ ಡೇರಿ / ಆಹಾರ ಉದ್ದಿಮೆಯಲ್ಲಿ ಕನಿಷ್ಠ 01 ವರ್ಷ ಸೇವೆ ಸಲ್ಲಿಸಿರುವ ಅನುಭವ ಹೊಂದಿರಬೇಕು. ಇದಕ್ಕೆ ಸಂಬಂಧಿಸಿದಂತೆ ಸೇವಾ ದೃಢೀಕರಣ (Experience Certificate) ಪತ್ರವನ್ನು ಲಗತ್ತಿಸಿರಬೇಕು.

2.7 ಟೆಂಡರ್‌ದಾರರು 2021–22, 2022–23 ಮತ್ತು 2023–24ನೇ ಸಾಲಿನ ವಾರ್ಷಿಕ ವಹಿವಾಟು (Turn over) ಹಾಗೂ IT Returns Copy ಲಗತ್ತಿಸಬೇಕು. ಟೆಂಡರ್‌ದಾರರು 2021–22, 2022–23 ಮತ್ತು 2023–24ನೇ ಸಾಲಿನ ವಾರ್ಷಿಕ ವಹಿವಾಟು ಕನಿಷ್ಠ ರೂ.ಒಂದು ಕೋಟಿ (01 ಕೋಟಿ) ಹಣದ ವ್ಯವಹಾರ ಮಾಡಿರಬೇಕು ಇದಕ್ಕೆ ಆರ್ಥಿಕ ತಃಖ್ತೆಗಳನ್ನು (P&L, Balance Sheet) ದೃಢೀಕರಿಸಿ ಲಗತ್ತಿಸಿರಬೇಕು.

2.8 ಸಕ್ಷಮಪ್ರಾಧಿಕಾರದಿಂದ ವೃತ್ತಿ ತೆರಿಗೆ ಪ್ರಮಾಣ ಪತ್ರವನ್ನು ದೃಢೀಕರಿಸಿ ಸಲ್ಲಿಸತಕ್ಕದ್ದು.

2.9 **ಟೆಂಡರುದಾರರು ನಮೂದಿಸುವ ದರವು, ಟಿ.ಡಿ.ಎಸ್. ಕಟಾವಣೆ, ಮೇಲ್ವಿಚಾರಕನ ವೇತನ, ಒಂದು ವರ್ಷಕ್ಕೆ ಪ್ರತಿ ಗುತ್ತಿಗೆ ಕಾರ್ಮಿಕನಿಗೆ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಮವಸ್ತ್ರ ವಿತರಿಸುವ ಷರತ್ತಿಗೆ ಒಳಪಟ್ಟು ಹಾಗೂ ತಮ್ಮ ಲಾಭಾಂಶವನ್ನು ಪರಿಗಣಿಸಿ ದರ ನಮೂದಿಸುವುದು.**

2.10 ಒಕ್ಕೂಟಕ್ಕೆ ಒದಗಿಸಲ್ಪಡುವ ಗುತ್ತಿಗೆ ಕಾರ್ಮಿಕರಿಗೆ ಒಂದು ತಿಂಗಳ ಮಜೂರಿಯನ್ನು ಪಾವತಿಸಲು ಆರ್ಥಿಕವಾಗಿ ಸದೃಢವಾಗಿರುವ ಬಿಡ್ಡುದಾರರು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸುವುದು.

2.11 ಟೆಂಡರ್‌ದಾರರು ಕರ್ನಾಟಕ ಸರ್ಕಾರವು ನಿಗಧಿಪಡಿಸಿರುವ ವಂಚನೆ ಮತ್ತು ಭ್ರಷ್ಟಚಾರ ಅಪರಾಧಗಳಿಗೆ ಸಂಬಂಧಿಸಿದಂತೆ ಅನರ್ಹತೆಗೆ ಒಳಗಾಗಿರಬಾರದು.

2.12 ಕ.ಸ.ಹಾ.ಮ.ದ ಯಾವುದೇ ಒಕ್ಕೂಟಗಳಲ್ಲಿ/ಘಟಕಗಳಲ್ಲಿ ಅತೃಪ್ತಿಕರ ಕಾರ್ಯ ನಿರ್ವಹಣೆಯಿಂದ ಟೆಂಡರ್‌ದಾರರ ಗುತ್ತಿಗೆ ರದ್ದುಗೊಂಡಿರಬಾರದು ಮತ್ತು ಕಪ್ಪು ಪಟ್ಟಿಗೆ ಸೇರಿದವರಾಗಿರಬಾರದು.

2.13 ಟೆಂಡರ್‌ನಲ್ಲಿ ಟೆಂಡರ್‌ದಾರರು ನಮೂದಿಸಿರುವ ದರ ಸಮಾನವಾದಲ್ಲಿ ಟೆಂಡರ್‌ದಾರರ ಸಂಸ್ಥೆಗಳ ವಿಶ್ವಾಸಾರ್ಹತೆ(Credibility), ಸೇವಾನುಭವ ಹಾಗೂ ಕಾರ್ಯಕ್ಷಮತೆಯನ್ನು ಪರಿಗಣಿಸಿ ಟೆಂಡರ್ ಅಂತಿಮಗೊಳಿಸಲಾಗುವುದು.

2.14 ಡೇರಿಯಲ್ಲಿ ಹಾಲಿ ನಿರ್ವಹಿಸಲಾಗುತ್ತಿರುವ ಕೆಲಸದ ಆಧಾರದ ಮೇಲೆ ಅಗತ್ಯವಿರುವ ಕನಿಷ್ಠ ಮಾನವ ಶಕ್ತಿಯನ್ನು ತಿಳಿಸಿದ್ದು ಅಗತ್ಯತೆಗನುಗುಣವಾಗಿ ಮಾನವಶಕ್ತಿಯನ್ನು ಒದಗಿಸುವುದು.

2.15 ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಒಕ್ಕೂಟದ ವ್ಯವಸ್ಥಾಪಕರು (ಅಭಿಯಂತರ) ರವರನ್ನು ದೂರವಾಣಿ ಸಂಖ್ಯೆ:7760971949 ಮೂಲಕ ಸಂಪರ್ಕಿಸಿ ಕಚೇರಿ ಸಮಯದಲ್ಲಿ ಪಡೆಯಬಹುದು.

**3.0 ಟೆಂಡರು ಸಲ್ಲಿಸಲು ತಗಲುವ ವೆಚ್ಚ:**

ಟೆಂಡರುದಾರರು ಟೆಂಡರು ತಯಾರಿಸುವುದಕ್ಕೆ ಮತ್ತು ಸಲ್ಲಿಸುವುದಕ್ಕೆ ಸಂಬಂಧಿಸುವ ವೆಚ್ಚವನ್ನು ತಾವೇ ಸ್ವತಃ ಭರಿಸಬೇಕು. ಟೆಂಡರು ಪ್ರಕ್ರಿಯೆಯಲ್ಲಿ ಬರುವ ಫಲಿತಾಂಶ ಏನೇ ಆದರೂ ಒಕ್ಕೂಟವು ಟೆಂಡರು ಸಲ್ಲಿಸಲು ತಗಲುವ ವೆಚ್ಚಕ್ಕೆ ಜವಾಬ್ದಾರವಲ್ಲ.

**4.0 ಟೆಂಡರು ದಸ್ತಾವೇಜಿನಲ್ಲಿ ಅಡಕವಾಗಿರುವುದು:**

4.1 ಕೆಲಸದ ವಿವರಣೆ, ಟೆಂಡರು ಪ್ರಕ್ರಿಯೆ, ಟೆಂಡರು ಷರತ್ತು ಮತ್ತು ಗುತ್ತಿಗೆ ಷರತ್ತು ಮತ್ತು ನಿಬಂಧನೆಗಳು: ಇವುಗಳ ವಿವರಗಳನ್ನು ದಸ್ತಾವೇಜು ಒಳಗೊಂಡಿರುತ್ತದೆ. ಟೆಂಡರು ಆಹ್ವಾನಿಸುವ ನೋಟಿಸಿನ ಜೊತೆಯಲ್ಲಿ ಟೆಂಡರು ದಸ್ತಾವೇಜು ಈ ಕೆಳಕಂಡವುಗಳನ್ನು ಒಳಗೊಂಡಿರುತ್ತದೆ.

**ಎ) ತಾಂತ್ರಿಕ ಟೆಂಡರು ಭಾಗ–1 :**

01. ತಾಂತ್ರಿಕ ಮತ್ತು ವಾಣಿಜ್ಯ ಟೆಂಡರು ಅರ್ಜಿ
02. ಟೆಂಡರು ಷರತ್ತು ಮತ್ತು ನಿಬಂಧನೆಗಳು
03. ಗುತ್ತಿಗೆ ಷರತ್ತು ಮತ್ತು ನಿಬಂಧನೆಗಳು
04. ಕೆಲಸದ ವಿವರಗಳು ಹಾಗೂ ಮಾನವ ಶಕ್ತಿಯ ವಿವರಗಳು

**ಟೆಂಡರುದಾರರ ಸಹಿ ಮತ್ತು ಮೊಹರು**

05. ಇ.ಎಂ.ಡಿ. ವಿವರಣೆ

06. ಟೆಂಡರುದಾರರ ನೊಂದಣಿ : ಪರವಾನಿಗಿ ವಿವರ

07. ತಾಂತ್ರಿಕ ಮತ್ತು ವಾಣಿಜ್ಯ ಟೆಂಡರು ತಪಶೀಲು ಪಟ್ಟಿ (Check list)

**ಬಿ) ವಾಣಿಜ್ಯ ಟೆಂಡರು ಭಾಗ – 2 :**

ವಾಣಿಜ್ಯ ಟೆಂಡರು ದರ ಪ್ರಸ್ತಾಪ

ವಾಣಿಜ್ಯ ದರ ಅನುಸೂಚಿ (Price Quote)

ಟೆಂಡರು ದಸ್ತಾವೇಜಿನಲ್ಲಿ ಇರುವ ಎಲ್ಲಾ ಸೂಚನೆಗಳು, ನಮೂನೆಗಳು, ವಿಶಿಷ್ಟ ವಿವರಣೆ (Specification) ಷರತ್ತು ಮತ್ತು ನಿಬಂಧನೆಗಳು ಇವುಗಳನ್ನು ಟೆಂಡರುದಾರರು ಅಧ್ಯಯನ ಮಾಡಿ ಮನವರಿಕೆ ಮಾಡಿಕೊಂಡು ಒಕ್ಕೂಟದ ಪೂರ್ವಾನುಮತಿಯೊಂದಿಗೆ ಕೆಲಸದ ಸ್ಥಳಕ್ಕೆ ಭೇಟಿ ನೀಡಿ ನಿರ್ವಹಿಸಬೇಕಾದ ಕೆಲಸಗಳನ್ನು ಖುದ್ದಾಗಿ ನೋಡಿ ಅದಕ್ಕೆ ಬೇಕಾದ ಸಂಪೂರ್ಣ ಮಾಹಿತಿಯನ್ನು ಒಕ್ಕೂಟದ ಅಧಿಕಾರಿಗಳಿಂದ ಪಡೆದು ಕೆಲಸದ ವ್ಯಾಪ್ತಿ ಅಗತ್ಯವಿರುವ ಕೆಲಸಗಾರರು ಮತ್ತು ಕೆಲಸಗಾರರಿಗೆ ನೀಡಬೇಕಾದ ಶಾಸನಬದ್ಧ ಸೌಲಭ್ಯಗಳ ಬಗ್ಗೆ ಮನವರಿಕೆ ಮಾಡಿಕೊಂಡ ನಂತರ ಟೆಂಡರು ದರ ನಮೂದಿಸುವುದು. ಕೆಲಸದ ವಿವರಣೆಯಲ್ಲಿ ನಮೂದಿಸಿರುವ ಕೆಲಸದ ವ್ಯಾಪ್ತಿಯು ಕೇವಲ ಸೂಚ್ಯವಾಗಿದ್ದು (Indicative) ವ್ಯಾಪಕವಲ್ಲ (exhaustive) ಟೆಂಡರು ದಸ್ತಾವೇಜಿನಲ್ಲಿರುವಂತೆ ಅವಶ್ಯವಿರುವ ಎಲ್ಲಾ ವಿಧದಲ್ಲಿ ವಾಸ್ತವಿಕವಾಗಿ ಪ್ರತಿಕ್ರಿಯಿಸುವ (substantially responsive) ರೀತಿಯಲ್ಲಿರದ ಟೆಂಡರನ್ನು ಸಲ್ಲಿಸಿದಲ್ಲಿ ಅದು ಟೆಂಡರುದಾರರ ಜವಾಬ್ದಾರಿಯಾಗುವುದು ಮತ್ತು ಟೆಂಡರು ತಿರಸ್ಕರಿಸಲು ಕಾರಣವಾಗುವುದು. ಟೆಂಡರುದಾರರು ನಮೂದಿಸಿದ / ಸಲ್ಲಿಸಿದ ಮಾಹಿತಿ ಸುಳ್ಳು ಎಂದು ಪರಿಶೀಲನೆಯ ಸಂದರ್ಭದಲ್ಲಿ ಕಂಡು ಬಂದಲ್ಲಿ ಯಾವುದೇ ನೋಟೀಸು ನೀಡದೆ ಟೆಂಡರನ್ನು ತಿರಸ್ಕರಿಸಲಾಗುವುದು / ಗುತ್ತಿಗೆಯನ್ನು ರದ್ದುಗೊಳಿಸಲಾಗುವುದು

**5.0 ಟೆಂಡರು ದಸ್ತಾವೇಜುಗಳ ತಿದ್ದುಪಡಿ:**

5.1 ಟೆಂಡರು ದಸ್ತಾವೇಜುಗಳ ನೀಡಿಕೆಯ ನಂತರ ಮತ್ತು ಟೆಂಡರನ್ನು ತೆರೆಯುವ ಮೊದಲು ಯಾವುದೇ ಸಮಯದಲ್ಲಿ ಒಕ್ಕೂಟವು ಯಾವುದೇ ಕಾರಣಗಳಿಗೆ ಸ್ವತಃ ತಾನೇ ಮುಂದಾಗಿ ಅಥವಾ ಭಾವೀ ಟೆಂಡರುದಾರರು ಸ್ಪಷ್ಟೀಕರಣಕ್ಕಾಗಿ ಮಾಡಿದ ಮನವಿಗೆ ಪ್ರತಿಕ್ರಿಯೆಯಾಗಿಯಾಗಲೀ ಟೆಂಡರು ದಸ್ತಾವೇಜುಗಳಿಗೆ ಯಾವುದೇ ಬದಲಾವಣೆಗಳು, ಮಾರ್ಪಾಟುಗಳು ಅಥವಾ ತಿದ್ದುಪಡಿಗಳು ಇವುಗಳನ್ನು ಮಾಡಬಹುದು.

5.2 ಭಾವೀ ಟೆಂಡರುದಾರರುಗಳಿಗೆ ಟೆಂಡರು ತಿದ್ದುಪಡಿಯನ್ನು ಪರಿಗಣಿಸಲು ಸೂಕ್ತವಾದ ಸಮಯವನ್ನು ನೀಡಲು ಸಾಧ್ಯವಾಗುವಂತೆ ಒಕ್ಕೂಟವು ತನ್ನ ವಿವೇಚನೆಯ ಮೇರೆಗೆ ಟೆಂಡರನ್ನು ಸಲ್ಲಿಸಲು ನಿಗದಿಪಡಿಸಿದ ಅವಧಿಯನ್ನು ವಿಸ್ತರಿಸುವುದು.

**6.0 ದಸ್ತಾವೇಜು ಒಳಗೊಂಡ ಟೆಂಡರು:**

6.1 ಟೆಂಡರುದಾರರು ಸಿದ್ಧಪಡಿಸುವ ಮತ್ತು ಸಹಿ ಮಾಡುವ ಟೆಂಡರು ಕೆಳಕಂಡವುಗಳನ್ನು ಒಳಗೊಂಡಿರುತ್ತವೆ.

**ತಾಂತ್ರಿಕ ಟೆಂಡರು ಈ ಕೆಳಕಂಡವುಗಳನ್ನು ಒಳಗೊಂಡಿರುತ್ತದೆ.**

ಎ) ತಾಂತ್ರಿಕ ಮತ್ತು ವಾಣಿಜ್ಯ ಟೆಂಡರು ಆಹ್ವಾನಿಸುವ ನೋಟೀಸು.

ಬಿ) ತಾಂತ್ರಿಕ ಮತ್ತು ವಾಣಿಜ್ಯ ಟೆಂಡರು ಅರ್ಜಿ

ಸಿ) ಟೆಂಡರು ಷರತ್ತು ಮತ್ತು ನಿಬಂಧನೆಗಳು

ಡಿ) ಗುತ್ತಿಗೆ ಷರತ್ತು ಮತ್ತು ನಿಬಂಧನೆಗಳು

ಇ) ಕೆಲಸದ ವಿವರಣೆ

ಎಫ್) ಇ.ಎಂ.ಡಿ. ವಿವರ

ಜಿ) ಟೆಂಡರುದಾರರ ವಿವರ

ಹೆಚ್) ತಾಂತ್ರಿಕ ಟೆಂಡರು ತಪಶೀಲು ಪಟ್ಟಿ (Check list)

ಮೇಲ್ಕಂಡ ದಾಖಲೆಗಳ ಜೊತೆಯಲ್ಲಿ ಟೆಂಡರ್‌ದಾರರ ಅರ್ಹತಾ ಪಟ್ಟಿಯಲ್ಲಿ ಸೂಚಿಸಿರುವ ದಾಖಲೆಗಳನ್ನು ಸಲ್ಲಿಸುವುದು.

**6.2 ವಾಣಿಜ್ಯ ಟೆಂಡರು ಭಾಗ–2 ಕೆಳಕಂಡವುಗಳನ್ನು ಒಳಗೊಂಡಿರುತ್ತದೆ.**

ಎ. ವಾಣಿಜ್ಯ ಟೆಂಡರು ದರ ಪ್ರಸ್ತಾಪ

ಬಿ. ವಾಣಿಜ್ಯ ಟೆಂಡರು ದರ ಅನುಸೂಚಿ **(Price Quote)**

**ಟೆಂಡರುದಾರರ ಸಹಿ ಮತ್ತು ಮೊಹರು**

**7.0 ನಿಗದಿತ ದರ:**

7.1 ಕಾಲಕಾಲಕ್ಕೆ ರಾಜ್ಯ ಸರ್ಕಾರದಿಂದ ಪರಿಷ್ಕರಿಸಲ್ಪಡುವ ಕನಿಷ್ಠ ವೇತನ ಮತ್ತು **Variable DA** ಕಾರಣದಿಂದಾಗಿ ಹೆಚ್ಚುವರಿಯಾಗುವ ಮೊತ್ತವನ್ನು ಹಾಗೂ ಹೆಚ್ಚುವರಿ ಮೊತ್ತಕ್ಕೆ ಸಂಬಂದಿಸಿದ ಜಿ.ಎಸ್.ಟಿಯನ್ನು ಮಾತ್ರ ಒಕ್ಕೂಟದಿಂದ ಪಾವತಿಸಲಾಗುವುದು. ಕನಿಷ್ಠ ವೇತನ ಮತ್ತು **Variable DA** ಪರಿಷ್ಕರಣೆಯ ದಿನಾಂಕದಂದು ಗುತ್ತಿಗೆ ಕೆಲಸಕ್ಕೆ ನಿಯೋಜಿಸಿದ ಕೆಲಸಗಾರರ ಸಂಖ್ಯೆಯನ್ನು ಹೊಂದಿಕೊಂಡು ವ್ಯತ್ಯಾಸದ ಮೊತ್ತವನ್ನು ಸೀಮಿತಗೊಳಿಸಲಾಗುವುದು. ಅದನ್ನು ಹೊರತುಪಡಿಸಿ ವಿಸ್ತರಿಸಿದ ಅವಧಿ ಒಳಗೊಂಡು ಗುತ್ತಿಗೆ ಅವಧಿಯಲ್ಲಿ ಗುತ್ತಿಗೆ ದರವು ಯಾವುದೇ ಹೆಚ್ಚಳ / ಇಳಿಕೆ ಇಲ್ಲದೆ ಸ್ಥಿರವಾಗಿ ಇರುತ್ತದೆ.

**8.0 ಮುಂಗಡ ಹಣ ಠೇವಣಿ (EMD)**

**8.1** ಟೆಂಡರುದಾರರು ಟೆಂಡರಿನ ಭಾಗವಾಗಿ, ಟೆಂಡರ್ ಆಹ್ವಾನಿಸುವ ನೋಟೀಸ್‌ನಲ್ಲಿ ನಿಗದಿಪಡಿಸಿದ ಇ.ಎಂ.ಡಿ. ಮೊತ್ತವನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪ್ರತ್ಯೇಕವಾಗಿ ಸಲ್ಲಿಸುವುದು. ಮುಂದುವರೆದ ITT Clause 7ರನ್ವಯ ಟೆಂಡರ್‌ದಾರರು ಇ.ಎಂ.ಡಿ ಮೊತ್ತವನ್ನು (ತಾಂತ್ರಿಕ ಟೆಂಡರು ಭಾಗ-1 ರAnneuxer A) ಮತ್ತು ಟೆಂಡರ್ Processing ಶುಲ್ಕವನ್ನು Procurement Portal ನಲ್ಲಿನ ಈ ಕೆಳಕಂಡ ಯಾವುದಾದರೂ ಆನ್‌ಲೈನ್ ರೂಪದ ಇ-ಪೇಮೆಂಟ್ ಮಾಡಬೇಕಾಗಿರುತ್ತದೆ.

| | | |
|---|---|---|
| **01.** | ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಮುಖ್ಯ ಡೇರಿ, ದಾವಣಗೆರೆ ಡೇರಿ ಮತ್ತು ಹೊನ್ನಾಳಿ, ತಡಗಣಿ ಹಾಗೂ ಚಿತ್ರದುರ್ಗ ಶೀತಲೀಕರಣ ಕೇಂದ್ರದ ತ್ಯಾಜ್ಯ ನೀರು ಸಂಸ್ಕರಣಾ ಘಟಕದ (ETP) ಚಾಲನೆ ಮತ್ತು ನಿರ್ವಹಣೆ ಕೆಲಸಗಳಿಗೆ ಸಂಬಂಧಿಸಿದಂತೆ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ದ್ವೈವಾರ್ಷಿಕ ಅವಧಿಗೆ ಗುತ್ತಿಗೆದಾರರಿಂದ ತಾಂತಿಕ ಮತ್ತು ವಾಣಿಜ್ಯ ಟೆಂಡರಿಗೆ ಟೆಂಡರು ದಸ್ತಾವೇಜುಗಳನ್ನು ಸಲ್ಲಿಸುವ ಬಗ್ಗೆ, | Rs. 2,50,000/- |

a. Credit Card
b. Debit Card
c. Internet Banking
d. National Electronic Fund Transfer (NEFT) / Real Time Gross Settlement (RTGS)
e. Over-the-Counter (OTC) remittance at ICICI Bank designated branches.

8.2 ಇ.ಎಂ.ಡಿ ಇಲ್ಲದೆ ಸಲ್ಲಿಸಿದ ಯಾವುದೇ ಟೆಂಡರನ್ನು ತಿರಸ್ಕರಿಸಲಾಗುವುದು.

8.3 ಯಶಸ್ವಿಯಾಗದ ಟೆಂಡರುದಾರರ ಇ.ಎಂ.ಡಿ ಹಣವನ್ನು ಟೆಂಡರ್ ತೆರೆದ 45 ದಿನಗಳ ಒಳಗಾಗಿ ಬಿಡುಗಡೆಗೊಳಿಸಲಾಗುವುದು. ಇ.ಎಂ.ಡಿ.ಗೆ ಯಾವುದೇ ರೀತಿಯ ಬಡ್ಡಿ ನೀಡಲಾಗುವುದಿಲ್ಲ.

8.4 ಯಶಸ್ವಿ ಟೆಂಡರುದಾರರ ಇ.ಎಂ.ಡಿ ಹಣವನ್ನು ಟೆಂಡರುದಾರರು ಒಕ್ಕೂಟದೊಂದಿಗೆ ಗುತ್ತಿಗೆ ಒಪ್ಪಂದವನ್ನು ಮಾಡಿಕೊಂಡು ಭದ್ರತಾ ಠೇವಣಿಯನ್ನು ಸಲ್ಲಿಸಿದ್ದ ನಂತರ ಬಿಡುಗಡೆಗೊಳಿಸಲಾಗುವುದು. ಇ.ಎಂ.ಡಿ. ಹಣ ಅಥವಾ ಭದ್ರತಾ ಠೇವಣಿ ಇದ್ದಲ್ಲಿ ಅದನ್ನು ಪ್ರಸಕ್ತ ಟೆಂಡರಿಗೆ ವರ್ಗಾಯಿಸಲು ಅವಕಾಶವಿಲ್ಲ. ಆದ್ದರಿಂದ ಟೆಂಡರಿನೊಂದಿಗೆ ಹೊಸದಾಗಿ ಇ.ಎಂ.ಡಿ ಹಣವನ್ನು ಕಡ್ಡಾಯವಾಗಿ ಸಲ್ಲಿಸಬೇಕು.

8.5 ಟೆಂಡರುದಾರರು ನಿಯಮಾನುಸಾರ ಇ.ಎಂ.ಡಿ.ಠೇವಣಿ ಪಾವತಿಸುವುದು ಕನಿಷ್ಠ ಅಗತ್ಯವಿರುತ್ತದೆ.

**9.0 ಇ.ಎಂ.ಡಿ. (EMD) ಮುಟ್ಟುಗೋಲು:**

ಇ.ಎಂ.ಡಿ ಮೊಬಲಗನ್ನು ಈ ಕೆಳಕಂಡ ಸಂದರ್ಭದಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

9.1 ಠೇವಣಿ ಮುಂಗಡ ಹಣ ಮುಟ್ಟುಗೋಲು: ಟೆಂಡರುದಾರರು ಒಕ್ಕೂಟವು ನಿಗದಿ ಪಡಿಸಿದ ಟೆಂಡರು ಸಿಂಧುವಾಗಿರುವ ಅವಧಿಯಲ್ಲಿ ದರವನ್ನು ನಮೂದಿಸಿರುವ ಟೆಂಡರನ್ನು ಗೌರವಿಸಲು ವಿಫಲರಾದಲ್ಲಿ ಅಥವಾ ದರ ಪ್ರಸ್ತಾಪವನ್ನು (Price

offer) ವಾಪಸ್ಸು ಪಡೆದಲ್ಲಿ ಅಥವಾ ಟೆಂಡರ್‌ದಾರರು ಯಾವುದೇ ಟೆಂಡರ್ ನಿಬಂಧನೆ ಹಾಗೂ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಯಶಸ್ವಿ ಟೆಂಡರುದಾರರ ಪ್ರಕರಣದಲ್ಲಿ:

1. ಗುತ್ತಿಗೆ ಒಪ್ಪಂದವನ್ನು ಮಾಡಿಕೊಳ್ಳಲು ಟೆಂಡರುದಾರರು ವಿಫಲರಾದಲ್ಲಿ
2. ಭದ್ರತಾ ಠೇವಣಿಯನ್ನು ಸಲ್ಲಿಸಲು ಟೆಂಡರುದಾರರು ವಿಫಲರಾದಲ್ಲಿ ಮುಂಗಡ ಹಣ ಠೇವಣಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
3. ತುಂಡು ಗುತ್ತಿಗೆ / ಮಾನವ ಶಕ್ತಿಗಳನ್ನು ವಿವಿಧ ಕೆಲಸಗಾರರಿಂದ ಮಾಡಿಸಲು ಕನಿಷ್ಟ ವೇತನ ಕಾಲ ಕಾಲಕ್ಕೆ ಅನ್ವಹಿಸುವ ತುಟ್ಟಿಭತ್ಯೆ, ಭವಿಷ್ಯ ನಿಧಿ, ನೌಕರರ ರಾಜ್ಯ ವಿಮೆ, ರಜೆ, ಬೋನಸ್, ಜಿ.ಎಸ್.ಟಿ. ಮತ್ತು ಸೇವಾ ಶುಲ್ಕ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಶಾಸನಬದ್ಧ ಹೊಣೆಗಾರಿಕೆಗಳಿಗಿಂತ ವಾಣಿಜ್ಯ ಟೆಂಡರಿನಲ್ಲಿ ನಮೂದಿಸಿರುವ ದರವು ಕಡಿಮೆಯಾದಲ್ಲಿ ಅಥವಾ ಸೇವಾ ಶುಲ್ಕವು ಶೇಕಡ ಶೂನ್ಯ(0) ಇದ್ದಲ್ಲಿ ವಾಣಿಜ್ಯ ಟೆಂಡರನ್ನು ತಿರಸ್ಕರಿಸಲಾಗುವುದು ಹಾಗೂ ಮುಂಗಡ ಹಣ ಠೇವಣಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

9.2 ಈ ಹಿಂದೆ ಸಲ್ಲಿಸಿದ್ದ ಮುಂಗಡ ಹಣ, ಠೇವಣಿ ಹಣ ಅಥವಾ ಭದ್ರತಾ ಠೇವಣಿ ಇದ್ದಲ್ಲಿ ಅದನ್ನು ಪ್ರಸಕ್ತ ಟೆಂಡರಿಗೆ ವರ್ಗಾಯಿಸಲು ಅವಕಾಶವಿಲ್ಲ. ಆದ್ದರಿಂದ ಟೆಂಡರಿನೊಂದಿಗೆ ಹೊಸದಾಗಿ ಮುಂಗಡ ಹಣ ಠೇವಣಿ (ಇ.ಎಂ.ಡಿ) ಹಣವನ್ನು ಕಡ್ಡಾಯವಾಗಿ ಸಲ್ಲಿಸಬೇಕು.

10.0 **<u>ಟೆಂಡರ್ ಸಿಂಧುತ್ವ ಅವಧಿ:</u>**

10.1 ವಾಣಿಜ್ಯ ಟೆಂಡರು ಭಾಗ–II ರಲ್ಲಿ ನಮೂದಿಸಿರುವ ದರವು ತಾಂತ್ರಿಕ ಟೆಂಡರು ಭಾಗ–1 ತೆರೆದ ನಂತರ 90 ದಿನಗಳವರೆಗೆ ಸಿಂಧುವಾಗಿರುತ್ತದೆ.

10.2 ವಿಶೇಷ ಸಂದರ್ಭಗಳಲ್ಲಿ ಒಕ್ಕೂಟವು ಟೆಂಡರು ಸಿಂಧುತ್ವ ಅವಧಿಯನ್ನು ವಿಸ್ತರಿಸುವ ಬಗ್ಗೆ ಟೆಂಡರುದಾರರ ಸಮ್ಮತಿಗಾಗಿ ಕೇಳಿಕೊಳ್ಳಬಹುದು.

**11.0 <u>ಟೆಂಡರು ದಸ್ತಾವೇಜುಗಳ ಸಹಿ:</u>**

**11.1** ಯಾವುದೇ ತಿದ್ದುಪಡಿ, ಹೊಡೆದು ಹಾಕಿರುವುದನ್ನು ಟೆಂಡರುದಾರರು ಅಥವಾ ಅಧಿಕೃತ ಸಹಿದಾರರು ದೃಢೀಕರಿಸಿ ಸಹಿ ಮಾಡಬೇಕು.

**11.2** ಟೆಂಡರುದಾರರು ತಾಂತ್ರಿಕ ಟೆಂಡರು ಮತ್ತು ವಾಣಿಜ್ಯ ಟೆಂಡರು ಅನ್ನು ಪೂರ್ಣ ಮಾಹಿತಿಯೊಂದಿಗೆ ತುಂಬಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಬೇಕು ಮತ್ತು ಅವುಗಳನ್ನು ತಾವೇ ಸಹಿ ಮಾಡಬೇಕು ಅಥವಾ ಟೆಂಡರುದಾರರನ್ನು ಗುತ್ತಿಗೆಗೆ ಬದ್ಧಗೊಳಿಸುವ ಅಧಿಕೃತಗೊಂಡ ವ್ಯಕ್ತಿಗಳು ಸಹಿ ಮಾಡಬೇಕು. ಯಾವುದೇ ಕಲಂಗಳನ್ನು ಖಾಲಿ ಬಿಡಬಾರದು. ಈ ಬಗ್ಗೆ ಸಂದೇಹ ಇದ್ದಲ್ಲಿ ಅಥವಾ ವಾಣಿಜ್ಯ ದರ ಅನುಸೂಚಿ ಹೊರತುಪಡಿಸಿ ದಸ್ತಾವೇಜು ಭರ್ತಿ ಮಾಡಲು ಸಹಾಯ ಅಗತ್ಯವಿದ್ದಲ್ಲಿ ಶಿವಮೊಗ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಅಭಿಯಂತರ ವಿಭಾಗವನ್ನು ಸಂಪರ್ಕಿಸಬಹುದು. ಟೆಂಡರು ದಸ್ತಾವೇಜಿನ ಎಲ್ಲಾ ಪುಟಗಳಿಗೂ ತಪ್ಪದೇ ಸಹಿ ಮಾಡುವುದು, ಯಾವುದೇ ತಿದ್ದುಪಡಿ, ಅಳಿಸಿ ಹಾಕಿರುವುದನ್ನು ಟೆಂಡರುದಾರರು ಅಥವಾ ಅಧಿಕೃತ ಸಹಿದಾರರು ದೃಢೀಕರಿಸಿ ಸಹಿ ಮಾಡಬೇಕು.

**12.0 ಟೆಂಡರ್ ಸಲ್ಲಿಸುವಿಕೆ:**

12.1 ತಾಂತ್ರಿಕ ಮತ್ತು ವಾಣಿಜ್ಯ ಟೆಂಡರುಗಳನ್ನು e-procurement portal ಮೂಲಕವೇ ಸಲ್ಲಿಸತಕ್ಕದ್ದು.

**13.0. ಟೆಂಡರು ಸಲ್ಲಿಸಲು ಗಡುವು :**

13.1 ಮುಂಗಡ ಹಣ ಠೇವಣಿಯೊಂದಿಗೆ (ಇ.ಎಂ.ಡಿ) ಎಲ್ಲಾ ರೀತಿಯಲ್ಲಿ ಪೂರ್ಣಗೊಳಿಸಿದ ತಾಂತ್ರಿಕ ಟೆಂಡರು ಮತ್ತು ವಾಣಿಜ್ಯ ಟೆಂಡರು ಇವುಗಳನ್ನು ಟೆಂಡರು ಸ್ವೀಕೃತಿಗೆ ನಿಗದಿಪಡಿಸಿದ ದಿನಾಂಕ ಮತ್ತು ಸಮಯದ ಮೊದಲು ಸಲ್ಲಿಸಬೇಕು. ನಿಗದಿತ ದಿನಾಂಕ ಮತ್ತು ವೇಳೆಯ ನಂತರ ಸಲ್ಲಿಸುವ / ಬರುವ ಟೆಂಡರುಗಳನ್ನು ಪರಿಗಣಿಸಲಾಗುವುದಿಲ್ಲ.

13.2 ಟೆಂಡರು ಸಲ್ಲಿಸಿದ ನಂತರ ಟೆಂಡರನ್ನು ಮಾರ್ಪಾಡು ಮಾಡಲು ಟೆಂಡರುದಾರರಿಗೆ ಅನುಮತಿಸಲಾಗುವುದಿಲ್ಲ.

13.3 ಟೆಂಡರು ಸಲ್ಲಿಸುವ ಗಡುವು ಮತ್ತು ಟೆಂಡರು ಸಿಂಧುತ್ವ ಅವಧಿಯ ಮುಕ್ತಾಯದ ಮಧ್ಯದಲ್ಲಿ ಟೆಂಡರನ್ನು ವಾಪಸ್ಸು ಪಡೆಯಲು ಯಾವುದೇ ಟೆಂಡರುದಾರರಿಗೆ ಅವಕಾಶವಿಲ್ಲ. ಒಂದು ವೇಳೆ ಹಿಂದಕ್ಕೆ ಪಡೆದಲ್ಲಿ ಮುಂಗಡ ಹಣ ಠೇವಣಿಯನ್ನು (ಇ.ಎಂ.ಡಿ) ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**14.0 <u>ಟೆಂಡರುಗಳನ್ನು ತೆರೆಯುವುದು</u>:**

14.1 ಶಿವಮೊಗ್ಗ, ದಾವಣಗೆರೆ & ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ಆಡಳಿತ ಮಂಡಳಿಯ ಸಭಾಂಗಣದಲ್ಲಿ ಟೆಂಡರು ತೆರೆಯುವ ಸಂದರ್ಭದಲ್ಲಿ ಉಪಸ್ಥಿತರಿರಲು ಇಚ್ಛಿಸಿ ಹಾಜರಿರುವ ಟೆಂಡರುದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ತಾಂತ್ರಿಕ ಟೆಂಡರು ಭಾಗ–1 ಇದನ್ನು ತೆರೆಯಲಾಗುವುದು. ಒಂದು ವೇಳೆ ಒಕ್ಕೂಟವು ಸದರಿ ದಿನವನ್ನು

ಸಾರ್ವತ್ರಿಕ ರಜೆಯೆಂದು ಘೋಷಿಸಿದಲ್ಲಿ ನಂತರ ಕೆಲಸದ ದಿನದಂದು ಅಥವಾ ಒಕ್ಕೂಟವು ಪ್ರಕಟಿಸುವ ದಿನಾಂಕದಂದು ತಾಂತ್ರಿಕ ಟೆಂಡರು ಭಾಗ–1 ನ್ನು ತೆರೆಯಲಾಗುವುದು.

14.2 ಟೆಂಡರು ತೆರೆಯುವ ಸಂದರ್ಭದಲ್ಲಿ ಹಾಜರಿರುವ ಟೆಂಡರುದಾರರು ಅಥವಾ ಅವರ ಪ್ರತಿನಿಧಿಗಳು ತಮ್ಮ ಹಾಜರಾತಿಯನ್ನು ಸಾಕ್ಷ್ಯಪಡಿಸುವ ಬಗ್ಗೆ ಒಕ್ಕೂಟದ ಪುಸ್ತಕದಲ್ಲಿ ಸಹಿ ಮಾಡುವುದು.

14.3 ಟೆಂಡರು ತೆರೆಯುವ ಸಮಯದಲ್ಲಿ ಪಾಲುಗೊಂಡ ಟೆಂಡರುದಾರರ ಹೆಸರು, ಸಲ್ಲಿಸಿದ ಇ.ಎಂ.ಡಿ ವಿವರ ಮತ್ತು ಸೂಕ್ತವಾದ ಟೆಂಡರು ವಿವರಗಳನ್ನು ಪ್ರಕಟಿಸಲಾಗುವುದು.(announced)

14.4 ಟೆಂಡರಿನ ವಾಣಿಜ್ಯ ಟೆಂಡರನ್ನು ತೆರೆಯುವ ಮತ್ತು ಪರಿಗಣಿಸುವ ಮೊದಲು ಟೆಂಡರುದಾರರ ಅರ್ಹತೆ, ಸೇವಾ ಅನುಭವ, ಕಾರ್ಯಕ್ಷಮತೆ, ಶಾಸನ ಬದ್ಧ ಪಾವತಿಗಳು, ಈ ಹಿಂದೆ ಕಾರ್ಯ ನಿರ್ವಹಣೆ ವಿವರ, ಸಂಸ್ಥೆಗಳು ಮುಂತಾದ ವಿಷಯಗಳ ಮೌಲ್ಯಮಾಪನ ಮಾಡಿ ಪರಿಗಣಿಸಿ ಇತ್ಯರ್ಥಪಡಿಸಲಾಗುವುದು.

14.5 ತಾಂತ್ರಿಕ ಟೆಂಡರನಲ್ಲಿ ನಿಗದಿಪಡಿಸಿದ ಷರತ್ತು ಮತ್ತು ನಿಬಂಧನೆಗಳ ರೀತ್ಯಾ ಅರ್ಹತೆಯನ್ನು ಗಳಿಸಿದ ಮತ್ತು ಆಯ್ಕೆಗೊಂಡ ಟೆಂಡರುದಾರರ ದರ ನಮೂದಿಸಿ ಸಲ್ಲಿಸಿದ ವಾಣಿಜ್ಯ ಟೆಂಡರನ್ನು ಮಾತ್ರ ಪರಿಗಣಿಸಲಾಗುವುದು.

14.6 ತಾಂತ್ರಿಕ ಟೆಂಡರು ಭಾಗ–1 ರ ಪರಿಶೀಲನೆಯ ನಂತರ ತಾಂತ್ರಿಕ ಅರ್ಹತೆಯನ್ನು ಗಳಿಸಿದ ಯಶಸ್ವಿ ಟೆಂಡರುದಾರರ ಪಟ್ಟಿಯನ್ನು ಮುಂದಿನ ದಿನಗಳಲ್ಲಿ ದಿನಾಂಕವನ್ನು ನಿಗದಿಪಡಿಸಿ ಶಿವಮೊಗ್ಗ, ದಾವಣಗೆರೆ & ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ಆಡಳಿತ ಮಂಡಳಿಯ ಸಭಾಂಗಣದಲ್ಲಿ ಟೆಂಡರ್ ವಾಣಿಜ್ಯ ಭಾಗ –2 ನ್ನು ತೆರೆಯಲಾಗುವುದಿದ್ದು, ಆ ಸಂದರ್ಭದಲ್ಲಿ ಉಪಸ್ಥಿತರಿರಲು ಇಚ್ಚಿಸಿ ಹಾಜರಿರುವ ಟೆಂಡರುದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಟೆಂಡರ್‌ನ್ನು ತೆರೆಯಲಾಗುವುದು. ಒಂದು ವೇಳೆ ಒಕ್ಕೂಟವು ಸದರಿ ದಿನವನ್ನು ಸಾರ್ವತ್ರಿಕ ರಜೆಯೆಂದು ಘೋಷಿಸಿದಲ್ಲಿ ನಂತರ ಕೆಲಸದ ದಿನದಂದು ಅಥವಾ ಒಕ್ಕೂಟವು ಪ್ರಕಟಿಸುವ ದಿನಾಂಕದಂದು ದಿನಾಂಕವನ್ನು ತಿಳಿಸಲಾಗುವುದು.

## 15.0 ಟೆಂಡರುಗಳ ಪರಿಶೀಲನೆ:

15.1 ಟೆಂಡರುಗಳು ಪರಿಪೂರ್ಣವಾಗಿವೆಯೇ ಎಂಬ ಬಗ್ಗೆ ಪರಿಶೀಲಿಸಲಾಗುವುದು ಮತ್ತು ಅರ್ಹ ಟೆಂಡರುದಾರರನ್ನು ಗುರುತಿಸುವುದು.

15.2 ತಾಂತ್ರಿಕ ಟೆಂಡರನಲ್ಲಿ ನಿಗದಿಪಡಿಸಿದ ಯಾವುದೇ ಒಂದು ಅಥವಾ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸದ ಟೆಂಡರುದಾರರ ವಾಣಿಜ್ಯ ಟೆಂಡರುದಾರರು ಸಲ್ಲಿಸಿದ ವ್ಯಾಣಿಜ್ಯ ಟೆಂಡರ್ ಅನ್ನು ತೆರೆಯಲಾಗುವುದಿಲ್ಲ ಹಾಗೂ ಪರಿಗಣಿಸಲಾಗುವುದಿಲ್ಲ.

15.3 ತಾಂತ್ರಿಕ ಟೆಂಡರನಲ್ಲಿ ನಮೂದಿಸಿದ ಎಲ್ಲಾ ಮಾಹಿತಿ / ಹೇಳಿಕೆಯನ್ನು ಪರಿಶೀಲಿಸುವ ಹಾಗೂ ಅಗತ್ಯವಿದ್ದಲ್ಲಿ ಹೆಚ್ಚುವರಿ ಮಾಹಿತಿಯನ್ನು ಕೇಳುವ ಅಧಿಕಾರವನ್ನು ಒಕ್ಕೂಟವು ಕಾದಿರಿಸಿಕೊಂಡಿದೆ.

15.4 ವಾಣಿಜ್ಯ ಟೆಂಡರನಲ್ಲಿ ದರವನ್ನು ನಮೂದಿಸುವಾಗ ಅದನ್ನು **ಸ್ಪಷ್ಟವಾಗಿ ಸಂಖ್ಯೆಗಳಲ್ಲಿ ಮತ್ತು ಅಕ್ಷರಗಳಲ್ಲಿ** ದಾಖಲಿಸಬೇಕು ಮತ್ತು ತಿದ್ದುಪಡಿಗಳು ಇದ್ದಲ್ಲಿ ಅದನ್ನು ಸಹಿ ಮಾಡಿ ದೃಢೀಕರಿಸಬೇಕು.

15.5 ಸಂಖ್ಯೆಗಳು ಮತ್ತು ಅಕ್ಷರಗಳು ಇವುಗಳಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ ಸದರಿ ಮೊತ್ತಗಳ ಪೈಕಿ ಕಡಿಮೆ ಇರುವುದನ್ನು ಪರಿಗಣಿಸಲಾಗುವುದು ಮತ್ತು ಅದೇ ಅಂತಿಮ.

15.6 ವಾಣಿಜ್ಯ ಟೆಂಡರ್‌ನಲ್ಲಿ ದರವನ್ನು ನಮೂದಿಸುವಾಗ ಟೆಂಡರ್ ದಾಸ್ತಾವೇಜಿನಲ್ಲಿ ತಿಳಿಸಿರುವ ಭಾಗವಾರು ನೀಡಲಾಗಿರುವ ನಮೂನೆಯಲ್ಲಿಯೇ ಪ್ರತ್ಯೇಕವಾಗಿ ದರಗಳನ್ನು ನಮೂದಿಸುವುದು.

## 16.0 ಟೆಂಡರುಗಳ ಮೌಲ್ಯಮಾಪನ:

16.1 ತಾಂತ್ರಿಕ ಕಾರ್ಯ ಕ್ಷಮತೆ, ಅನುಭವ ಮತ್ತು ಗುತ್ತಿಗೆ ಸೇವೆಗೆ ನಮೂದಿಸಿದ ದರವನ್ನು ಪರಿಗಣಿಸಿ ಟೆಂಡರುಗಳನ್ನು ಮೌಲ್ಯಮಾಪನ ಮಾಡಲಾಗುವುದು. ತುಂಡು ಗುತ್ತಿಗೆ / ಮಾನವ ಶಕ್ತಿಗಳನ್ನು ವಿವಿಧ ಕೆಲಸಗಾರರಿಂದ ಮಾಡಿಸಲು ಕನಿಷ್ಠ ವೇತನ ಕಾಲ ಕಾಲಕ್ಕೆ ಅನ್ವಹಿಸುವ ತುಟ್ಟಿಭತ್ಯೆ, ಭವಿಷ್ಯ ನಿಧಿ, ನೌಕರರ ರಾಜ್ಯ ವಿಮೆ, ರಜೆ, ಬೋನಸ್, ಜಿ.ಎಸ್.ಟಿ. ಮತ್ತು ಸೇವಾ ಶುಲ್ಕ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಶಾಸನಬದ್ಧ ಹೊಣೆಗಾರಿಕೆಗಳಿಗಿಂತ ವಾಣಿಜ್ಯ ಟೆಂಡರಿನಲ್ಲಿ ನಮೂದಿಸಿರುವ ದರವು ಕಡಿಮೆಯಾದಲ್ಲಿ ಅಥವಾ ಸೇವಾ ಶುಲ್ಕವು ಶೇಕಡ ಶೂನ್ಯ(0) ಇದ್ದಲ್ಲಿ ವಾಣಿಜ್ಯ ಟೆಂಡರನ್ನು ತಿರಸ್ಕರಿಸಲಾಗುವುದು.

## 17.0 ಗುತ್ತಿಗೆ ನೀಡಲು ಮಾನದಂಡ:

17.1 ಟೆಂಡರು ದಸ್ತಾವೇಜುಗಳಿಗೆ ಎಲ್ಲಾ ವಿಧದಲ್ಲಿ ವಾಸ್ತವಿಕವಾಗಿ ಪ್ರತಿಕ್ರಿಯಿಸುವ **(substantially responsive)** ರೀತಿಯಲ್ಲಿರುವುದಾಗಿ ಪರಿಗಣಿಸಲಾದ ಟೆಂಡರು ಮತ್ತು ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಹೊನ್ನಾಳಿ, ತಡಗಣಿ ಮತ್ತು ಚಿತ್ರದುರ್ಗ ಶೀತಲೀಕರಣ ಕೇಂದ್ರಗಳು ಸೇರಿದಂತೆ ಕಡಿಮೆ ದರ ನಮೂದಿಸಿದ ಟೆಂಡರುದಾರರಿಗೆ ಒಕ್ಕೂಟವು ಗುತ್ತಿಗೆ ಆದೇಶವನ್ನು ನೀಡುವುದು ಹಾಗೂ ಟೆಂಡರುದಾರರಿಗೆ ಗುತ್ತಿಗೆಯನ್ನು ಸಮರ್ಥವಾಗಿ ನಿರ್ವಹಿಸುವ ಅರ್ಹತೆ ಮತ್ತು ಸಂಪನ್ಮೂಲ ಇರಬೇಕು.

**ಟೆಂಡರುದಾರರ ಸಹಿ ಮತ್ತು ಮೊಹರು**

**18.0 ಒಕ್ಕೂಟದ ಹಕ್ಕುಗಳು:**

18.1 ಯಾವುದೇ ಕಾರಣಗಳನ್ನು ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರುಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಮತ್ತು ಗುತ್ತಿಗೆ ನೀಡುವ ಮೊದಲು ಯಾವುದೇ ಸಮಯದಲ್ಲಿ ಟೆಂಡರು ಪ್ರಕ್ರಿಯೆಯನ್ನು ರದ್ದುಗೊಳಿಸುವ ಮತ್ತು ಕಡಿಮೆ ದರ ನಮೂದಿಸಿದ ಟೆಂಡರುದಾರರೊಂದಿಗೆ ಮಾತ್ರ ದರಗಳನ್ನು ನಿಷ್ಕರ್ಷೆ ಮಾಡುವ (Negotiation) ಅಥವಾ ಒಪ್ಪಿಕೊಳ್ಳುವ / ತಿರಸ್ಕರಿಸುವ ಅಧಿಕಾರವನ್ನು ಒಕ್ಕೂಟದ ಟೆಂಡರು ಅಂಗೀಕರಿಸುವ ಪ್ರಾಧಿಕಾರ ಕಾದಿರಿಸಿಕೊಂಡಿದೆ. ಟೆಂಡರು ದರ ಅನುಸೂಚಿಯಲ್ಲಿ ಒಳಗೊಂಡಿರುವುದು ಏನೇ ಇದ್ದರೂ ಕಡಿಮೆ ದರ ನಮೂದಿಸದ ಟೆಂಡರನ್ನು ಅಂಗೀಕರಿಸುವ ಬಗ್ಗೆ ಒಕ್ಕೂಟಕ್ಕೆ ನಿರ್ಬಂಧ (obligation) ಇರುವುದಿಲ್ಲ. ಆ ಕಾರಣದಿಂದ ಬಾಧಿತರಾದ ಟೆಂಡರುದಾರರಿಗೆ ಒಕ್ಕೂಟವು ಯಾವುದೇ ಹೊಣೆಗೆ ಗುರಿಯಾಗುವುದಿಲ್ಲ ಅಥವಾ ಒಕ್ಕೂಟವು ಕ್ರಮ ಕೈಗೊಂಡ ಬಗ್ಗೆ ಕಾರಣಗಳನ್ನು ಬಾಧಿತ ಟೆಂಡರುದಾರರಿಗೆ ತಿಳಿಸಬೇಕಾದ ಬಾಧ್ಯತೆಯಿರುವುದಿಲ್ಲ. ಈ ಟೆಂಡರಿಗೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳಲ್ಲೂ ಒಕ್ಕೂಟವು ಕೈಗೊಳ್ಳುವ ತೀರ್ಮಾನವೇ ಅಂತಿಮ ಮತ್ತು ಅದಕ್ಕೆ ಟೆಂಡರುದಾರರು ಬದ್ಧರಾಗಿರುತ್ತಾರೆ. ಈ ಬಗ್ಗೆ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿಲ್ಲ.

18.2 ಷರತ್ತುಬದ್ಧ ಟೆಂಡರುಗಳನ್ನು (Conditional tenders) ಅಂಗೀಕರಿಸಲಾಗುವುದಿಲ್ಲ. ಟೆಂಡರುದಾರರು ಟೆಂಡರು ದಸ್ತಾವೇಜಿನೊಂದಿಗೆ ಒಕ್ಕೂಟದ ಷರತ್ತುಗಳಿಗೆ ಪ್ರತಿಯಾಗಿ ಯಾವುದೇ ಷರತ್ತುಗಳನ್ನು (Counter Conditions) ವಿಧಿಸಬಾರದು. ಒಂದು ವೇಳೆ ವಿಧಿಸಿದಲ್ಲಿ ಒಕ್ಕೂಟವು ಅದಕ್ಕೆ ಬದ್ಧವಲ್ಲ. ಅಂತಹ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

18.3 ಗುತ್ತಿಗೆಯನ್ನು ನೀಡುವ ಸಮಯದಲ್ಲಿ, ದರದಲ್ಲಿ ಅಥವಾ ಇತರ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಮಾಡದೆ ಕೆಲಸದ ಪರಿಮಾಣವನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಅಧಿಕಾರವನ್ನು ಒಕ್ಕೂಟವು ಕಾದಿರಿಸಿಕೊಂಡಿದೆ.

**19.0 ಐತೀರ್ಪು ಪ್ರಕಟಣೆ:**

19.1 ಟೆಂಡರಿನ ಸಿಂಧುತ್ವ ಅವಧಿ ಮುಕ್ತಾಯಗೊಳ್ಳುವ ಮೊದಲು ಒಕ್ಕೂಟವು ಟೆಂಡರು ಅಂಗೀಕೃತಗೊಂಡ ಬಗ್ಗೆ ಯಶಸ್ವಿ ಟೆಂಡರುದಾರರರಿಗೆ ಬರವಣಿಗೆಯಲ್ಲಿ ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಅಥವಾ ಇ–ಮೇಲ್ ಮೂಲಕ ತಿಳಿಸಲಾಗುವುದು. ಅಲ್ಲದೇ ಯಶಸ್ವಿ ಟೆಂಡರುದಾರರ ವಿವರಗಳನ್ನು ಇ–ಪೋರ್ಟಲ್ ಅಧಿಕಾರಿಗಳಿಗೆ ನಿಯಮಾನುಸಾರ ಮಾಹಿತಿ ನೀಡಲಾಗುವುದು. ಟೆಂಡರು ಅಂಗೀಕೃತಗೊಂಡ ಅಥವಾ ತಿರಸ್ಕೃತಗೊಂಡ ಬಗ್ಗೆ ಮಾಹಿತಿಯು ಇ–ಪೋರ್ಟಲ್‌ನಲ್ಲಿ ಲಭ್ಯವಿರುತ್ತದೆ.

19.2 ಈ ರೀತಿ ಪ್ರಕಟಿಸಿದ ಐತೀರ್ಪು ಗುತ್ತಿಗೆಯ ರಚನೆಗೆ ಕಾರಣವಾಗುತ್ತದೆ.

19.3 ಯಶಸ್ವಿ ಟೆಂಡರುದಾರರು ಭದ್ರತಾ ಠೇವಣಿ ಪಾವತಿಸಿ ಒಪ್ಪಂದವನ್ನು ಮಾಡಿಕೊಂಡ ನಂತರ ಒಕ್ಕೂಟವು ಟೆಂಡರುದಾರರ ಮುಂಗಡ ಹಣ ಠೇವಣಿಯನ್ನು ಹಿಂದಿರುಗಿಸುವುದು.

**20.0 ಗುತ್ತಿಗೆ ವರ್ಗಾವಣೆ:**

20.1 ಯಾವುದೇ ಕಾರಣಕ್ಕಾಗಿಯಾಗಲೀ ಗುತ್ತಿಗೆ ಪ್ರಾರಂಭದ ಮೊದಲು ಅಥವಾ ಗುತ್ತಿಗೆ ಪ್ರಾರಂಭವಾದ ನಂತರ ಗುತ್ತಿಗೆಯು ವರ್ಗಾವಣೆಯಾಗತಕ್ಕದ್ದಲ್ಲ. ಗುತ್ತಿಗೆಯ ಹಕ್ಕನ್ನು ಯಾವುದೇ ರೀತಿಯಲ್ಲಿ ಬೇರೆಯವರಿಗೆ ವಹಿಸಲು / ವರ್ಗಾಹಿಸಲು ಗುತ್ತಿಗೆಯಲ್ಲಿ ನಿಗದಿಪಡಿಸಿರುವ ಜವಾಬ್ದಾರಿಯನ್ನು ತ್ಯಜಿಸಲು ಅವಕಾಶವಿಲ್ಲ.

20.2 ಗುತ್ತಿಗೆ ವರ್ಗಾವಣೆಯ ಯಾವುದೇ ಮನವಿಯನ್ನು ಷರತ್ತುಗಳನ್ನು ಪಾಲಿಸಿಲ್ಲವೆಂದು ಪರಿಗಣಿಸಲಾಗುವುದು ಮತ್ತು ಮುಂಗಡ ಹಣ ಠೇವಣಿ ಅಥವಾ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

20.3 ಗುತ್ತಿಗೆದಾರರು ಅವರ ಗುತ್ತಿಗೆ ಅವಧಿಯಲ್ಲಿ ಅವರ ಪರವಾಗಿ ಗುತ್ತಿಗೆ ಕೆಲಸಗಳನ್ನು ನಿರ್ವಹಿಸಲು ಬೇರೆಯವರಿಗೆ ಅಧಿಕಾರ ನೀಡಲು ಅವಕಾಶವಿರುವುದಿಲ್ಲ.

**21.0 ಭದ್ರತಾ ಠೇವಣಿ:**

21.1 ಒಪ್ಪಿಗೆ ಪತ್ರ ತಲುಪಿದ 15 ದಿನಗಳೊಳಗೆ ಯಶಸ್ವಿ ಟೆಂಡರುದಾರರು ಗುತ್ತಿಗೆಯನ್ನು ನಿರ್ವಹಿಸುವುದಕ್ಕೆ ಖಾತರಿಯಾಗಿ Security Deposit for an Amount Equivalent to 5% of the Contract Price Calculated for contract term (2 Years) ರೀತ್ಯಾ ಭದ್ರತಾ ಠೇವಣಿಯಾಗಿ ಸಲ್ಲಿಸಬೇಕು.

21.2 ಭದ್ರತಾ ಠೇವಣಿಯು ಈ ಕೆಳಗೆ ನಮೂದಿಸಿದಂತೆ ಇರಬೇಕು.

ರಾಷ್ಟ್ರೀಕೃತ / ಶೆಡ್ಯೂಲ್ ಬ್ಯಾಂಕಿನಿಂದ"Managing Director, Shivamogga, Davanagere and Chitradurga Dist. Co-operative Milk Producers's Societies Union Ltd.,"ಇವರ ಹೆಸರಿನಲ್ಲಿ ಶಿವಮೊಗ್ಗದಲ್ಲಿ ಪಾವತಿಯಾಗುವಂತೆ ಪಡೆದ ಡಿಮಾಂಡ್ ಡ್ರಾಫ್ಟ್ / ಬ್ಯಾಂಕರ್ ಚೆಕ್ / ಪೇ ಆರ್ಡರ್ ರೂಪದಲ್ಲಿ ಇರಬೇಕು. ಭದ್ರತಾ ಠೇವಣಿಗೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ ಹಾಗೂ ಗುತ್ತಿಗೆದಾರರು ಗುತ್ತಿಗೆ ಅವಧಿ

ಪೂರ್ಣಗೊಂಡ ನಂತರ ಭದ್ರತಾ ಠೇವಣಿಯನ್ನು ವಾಪಸ್ ಪಡೆಯುವ ಮೊದಲು ಇ.ಪಿ.ಎಫ್. / ಇ.ಎಸ್.ಐ. ಸಂಸ್ಥೆಗಳಿಂದ ಎನ್.ಓ.ಸಿ. ಪ್ರಮಾಣ ಪತ್ರ ಸಲ್ಲಿಸಿದ ನಂತರ ಹಣವನ್ನು ಬಿಡುಗಡೆ ಮಾಡಲಾಗುವುದು.

**ಅಥವಾ**

ಒಕ್ಕೂಟಕ್ಕೆ ಠೇವಣಿಯಾಗಿ ಭದ್ರತೆಯ ರೂಪದಲ್ಲಿ ರಾಷ್ಟ್ರೀಕೃತ / ಶೆಡ್ಯುಲ್ ಬ್ಯಾಂಕಿನಿಂದ ಪಡೆದ ಗುತ್ತಿಗೆ ಅವಧಿ, ಗುತ್ತಿಗೆ ವಿಸ್ತರಣೆ ಅವಧಿ ಮತ್ತು ಕ್ಲೇಮ್ ಅವಧಿ ಒಳಗೊಂಡು ಗುತ್ತಿಗೆ ಪ್ರಾರಂಭವಾಗುವ ದಿನಾಂಕದಿಂದ ಒಟ್ಟು ಎರಡು ವರ್ಷ ಹಾಗೂ ಆರು ತಿಂಗಳ ಅವಧಿಗೆ ಸಿಂಧುವಾದ ಹಿಂದಕ್ಕೆ ತೆಗೆದುಕೊಳ್ಳಲಾಗದ / ರದ್ದುಪಡಿಸಲಾಗದ (irrevocable) ಮತ್ತು ಯಾವುದೇ ಷರತ್ತಿಲ್ಲದ **(Unconditional)** ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಸಲ್ಲಿಸಬೇಕು.

21.3 ಯಶಸ್ವಿ ಟೆಂಡರುದಾರರು ಟೆಂಡರು ಷರತ್ತುಗಳ ಉಪಬಂಧಗಳನ್ನು ಪಾಲಿಸಲು ವಿಫಲರಾದಲ್ಲಿ ನೀಡಿರುವ ಗುತ್ತಿಗೆಯನ್ನು ರದ್ದುಪಡಿಸಲು ಮತ್ತು ಮುಂಗಡ ಹಣ ಠೇವಣಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

## 22.0 ಒಪ್ಪಂದ ಸಹಿ ಮಾಡುವುದು.

22.1 ಟೆಂಡರು ಅಂಗೀಕೃತಗೊಂಡ ಬಗ್ಗೆ ಯಶಸ್ವಿ ಟೆಂಡರುದಾರರಿಗೆ ಒಕ್ಕೂಟವು ಒಪ್ಪಿಗೆ ಪತ್ರವನ್ನು (Letter of Acceptance) ನೀಡಿದ ಕೂಡಲೆ ನಿಗದಿತ ಒಪ್ಪಂದದ ಪ್ರತಿಯನ್ನು ಒಕ್ಕೂಟದಿಂದ ಪಡೆದು ಅದರ ರೀತ್ಯಾ 21 ದಿನಗಳೊಳಗೆ ಒಪ್ಪಂದವನ್ನು ಮಾಡಿಕೊಳ್ಳಬೇಕು.

**ವ್ಯವಸ್ಥಾಪಕ ನಿರ್ದೇಶಕರು**
ಶಿವಮೊಗ್ಗ ಜಿಲ್ಲಾ ಸಹಾಕರ ಹಾಲು ಒಕ್ಕೂಟ ನಿ.,

ಮೇಲಿನ ಷರತ್ತು : ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ / ನಾವು ಒಪ್ಪಿರುತ್ತೇವೆ.

**ಟೆಂಡರುದಾರರ ಸಹಿ ಮತ್ತು ಮೊಹರು**

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ ಮತ್ತು ಹೊನ್ನಾಳಿ, ತಡಗಣಿ ಹಾಗೂ ಚಿತ್ರದುರ್ಗ ಶೀತಲೀಕರಣ ಕೇಂದ್ರಗಳ ತ್ಯಾಜ್ಯ ನೀರು ಸಂಸ್ಕರಣಾ ಘಟಕದ (ETP) ಚಾಲನೆ ಮತ್ತು ನಿರ್ವಹಣೆಯನ್ನು ಅಗತ್ಯ ರಾಸಾಯನಿಕಗಳ ಸರಬರಾಜಿನೊಂದಿಗೆ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ನಿರ್ವಹಣೆ ಕಾರ್ಯವನ್ನು ನಿರ್ವಹಿಸುವ ಸಲುವಾಗಿ ಅರ್ಹ ನೊಂದಾಯಿತ ಕಾರ್ಮಿಕ ಗುತ್ತಿಗೆದಾರರಿಂದ / ಸಂಸ್ಥೆಗಳಿಂದ (Registered Labour Contractor) ಸಂಬಂಧಿಸಿದಂತೆ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರಿಗೆ ಟೆಂಡರು ದಸ್ತಾವೇಜುಗಳನ್ನು ಸಲ್ಲಿಸುವ ಕುರಿತು.**

**ಗುತ್ತಿಗೆಯ ಷರತ್ತು ಮತ್ತು ನಿಬಂಧನೆಗಳು:–**

**1.0 ಗುತ್ತಿಗೆ ಸಿಂಧುತ್ವ:**

1.1 ಗುತ್ತಿಗೆ ಅವಧಿಯು ಪ್ರಾರಂಭದ ದಿನಾಂಕದಿಂದ ಎರಡು ವರ್ಷದ ಅವಧಿಗೆ ಇರುತ್ತದೆ.

1.2 ಕರಾರನ್ನು ಸಹಿ ಮಾಡಿದ ಮತ್ತು ನಿಗದಿಪಡಿಸಿದ ಭದ್ರತಾ ಠೇವಣಿಯನ್ನು ಸಲ್ಲಿಸಿದ ನಂತರ ಒಕ್ಕೂಟವು ಸೂಚಿಸುವ ದಿನ / ದಿನಾಂಕದಿಂದ ಗುತ್ತಿಗೆಯು ಪ್ರಾರಂಭವಾಗುವುದು.

1.3 ಪ್ರತಿ ಸಿಬ್ಬಂದಿಯನ್ನು ಭದ್ರತಾ ವಿಭಾಗದಲ್ಲಿ ಪ್ರತಿ ಬಾರಿ ಒಳಗೆ ಬಿಡುವಾಗ ಮತ್ತೆ ಹೊರಕ್ಕೆ ಹೋಗುವಾಗ ತಪಾಸಣೆಗೆ ಒಳಪಡಿಸಲಾಗುವುದು. ಕೆಲಸದ ಅವಧಿಯಲ್ಲಿ ಮಾತ್ರ ಡೇರಿ/ಶಿತಲೀಕರಣ ಕೇಂದ್ರದ ಆವರಣದಲ್ಲಿ ಇರಬೇಕು. ಕೆಲಸಕ್ಕೆ ಹಾಜರಾಗುವಾಗ ಹಾಜರಾತಿಯನ್ನು ಭದ್ರತಾ ವಿಭಾಗದಲ್ಲಿ ಕಡ್ಡಾಯವಾಗಿ ದಾಖಲಿಸಬೇಕು.

1.4 ಗುತ್ತಿಗೆ ಅವಧಿ ಮುಕ್ತಾಯಗೊಂಡ ನಂತರ ಒಕ್ಕೂಟದ ವಿವೇಚನೆಯ ಮೇರೆಗೆ ಪ್ರಸ್ತುತ ಗುತ್ತಿಗೆಯ ಅಥವಾ ಪರಸ್ಪರ ಒಪ್ಪಬಹುದಾದ ಷರತ್ತುಗಳಿಗೆ ಒಳಪಟ್ಟು ಚಾಲ್ತಿಯಲ್ಲಿರುವ ದರದಲ್ಲಿಯೇ ಗುತ್ತಿಗೆ ಅವಧಿಯನ್ನು 90 ದಿನಗಳ ವಿಸ್ತರಿಸುವ ಅಧಿಕಾರವನ್ನು ಒಕ್ಕೂಟವು ಹೊಂದಿರುತ್ತದೆ.

**2.0 ಗುತ್ತಿಗೆ ದರ**

2.1 ಒಪ್ಪಂದದ ಪ್ರಕಾರ ಪೂರ್ಣವಾಗಿ ಮತ್ತು ತೃಪ್ತಿಕರವಾಗಿ ನಿರ್ವಹಿಸಿದ ಕೆಲಸಕ್ಕೆ ಗುತ್ತಿಗೆ ಮೊತ್ತವನ್ನು ಒಕ್ಕೂಟದಿಂದ ಗುತ್ತಿಗೆಯನ್ನು ಪಡೆದ ಗುತ್ತಿಗೆದಾರರಿಗೆ ಪಾವತಿಸಲಾಗುವುದು.

**2.2 ಗುತ್ತಿಗೆದಾರರು ನಮೂದಿಸಿರುವ ದರದಲ್ಲಿ ಕನಿಷ್ಟ ವೇತನ ಕಾಯ್ದೆಯನ್ವಯ ಗುತ್ತಿಗೆ ಕಾರ್ಮಿಕರಿಗೆ ಪಾವತಿಸುವ ಕನಿಷ್ಟ ವೇತನ ಸೌಲಭ್ಯಗಳಾದ ತುಟ್ಟಿಭತ್ಯೆ, ಭವಿಷ್ಯ ನಿಧಿ, ನೌಕರರ ಇ.ಎಸ್.ಐ ವಂತಿಗೆ, ಸಾರ್ವತ್ರಿಕ ರಜೆ, ಗಳಿಕೆ ರಜೆ ಬೋನಸ್, ಸೇವಾಶುಲ್ಕ, ಜಿ.ಎಸ್.ಟಿ ಮತ್ತು ಶಾಸನಬದ್ದ ಕಟಾವಣೆಗಳಾದ ಆದಾಯ ತೆರಿಗೆ (ಟಿ.ಡಿ.ಎಸ್), ಮುಂತಾದ ಶಾಸನಬದ್ದ ವೆಚ್ಚಗಳನ್ನು ಸೇರಿಸಿ ಲೆಕ್ಕಾಚಾರ ಮಾಡಿದಾಗ ಗುತ್ತಿಗೆದಾರರ ಲಾಭಾಂಶವು ಶೂನ್ಯ ಶೇಕಡವಾರು (0%) ಇದ್ದಲ್ಲಿ ಅಂತಹ ಟೆಂಡರು ಅಂಗೀಕಾರಕ್ಕೆ ಅರ್ಹವಾಗುವುದಿಲ್ಲ. ಈ ಟೆಂಡರನ್ನು ಆಂಡರ್ ಕೋಟ್ ಎಂದು ಪರಿಗಣಿಸಿ ತಿರಸ್ಕರಿಸಲಾಗುವುದು.**

**3.0 ಬಿಲ್ಲು ಪಾವತಿ:**

3.1 ಗುತ್ತಿಗೆದಾರರು ಪ್ರತಿ ತಿಂಗಳು ನಿರ್ವಹಿಸಿದ ಗುತ್ತಿಗೆ ಕೆಲಸದ ಮತ್ತು ನಿಯೋಜಿಸಿದ ನೌಕರರ ವಿವರವನ್ನು ಒಳಗೊಂಡ ಬಿಲ್ಲನ್ನು ರೊಚ್ಚು ನೀರು ಪರೀಕ್ಷಾವರದಿಯೊಂದಿಗೆ ಸಂಭಂದಿಸಿದ ವಿಭಾಗಗಳ/ಶಿತಲೀಕರಣ ಕೇಂದ್ರಗಳ ಮೇಲ್ವಿಚಾರಕರ ಧೃಢೀಕರಣದೊಂದಿಗೆ ಅಗತ್ಯ ಕೆಳಕಾಣಿಸಿದ ದಾಖಲೆಗಳೊಂದಿಗೆ ನಿಗದಿತ ಅವಧಿಯೊಳಗಾಗಿ ಸಲ್ಲಿಸುವುದು.

3.2 ಕಾರ್ಮಿಕರಿಗೆ ಕನಿಷ್ಟ ವೇತನ ಕಾಯ್ದೆ 1948ರ ಅನ್ವಯ ವೇತನ ಹಾಗೂ ಬಾಕಿ ವೇತನ (Arrear) ಪಾವತಿಸಿ ಸಂಬಂಧಿಸಿದ ಹಾಜರಾತಿ ಹಾಗೂ Muster Roleನ ಜೆರಾಕ್ಸ್ ಪ್ರತಿಯನ್ನು ದೃಢೀಕರಿಸಿ ನಿಗದಿತ ನಮೂನೆಯಲ್ಲಿ ಸಲ್ಲಿಸುವುದು.

3.3 ಇ.ಪಿ.ಎಫ್. ಮತ್ತು ಇ.ಎಸ್.ಐ. ವಂತಿಗೆ ಪಾವತಿಸಿರುವ ಚಲನ್‌ಗಳ ಜೆರಾಕ್ಸ್ ಪ್ರತಿಯನ್ನು ಒಕ್ಕೂಟಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಚಲನ್‌ಗಳನ್ನು ದೃಢೀಕರಿಸಿ ಹಾಗೂ ಜಿ.ಎಸ್.ಟಿ. ಪಾವತಿಸಿರುವುದಕ್ಕೆ ದಾಖಲಾತಿಯಾದ TR-6 Challan ನ ಜೆರಾಕ್ಸ್ ಪ್ರತಿಯನ್ನು ದೃಢೀಕರಿಸಿ ತಪ್ಪದೇ ಬಿಲ್ಲಿನ ಜೊತೆ ಸಲ್ಲಿಸತಕ್ಕದ್ದು, ಇಲ್ಲವಾದರೆ ಜಿ.ಎಸ್.ಟಿ ಭಾಗವನ್ನು ಕಡಿತ ಮಾಡಿ ಬಿಲ್ಲನ್ನು ಉತ್ತೀರ್ಣ ಮಾಡಲಾಗುವುದು.

**ಟೆಂಡರುದಾರರ ಸಹಿ ಮತ್ತು ಮೊಹರು**

3.4 ಗುತ್ತಿಗೆದಾರರು ಒಕ್ಕೂಟಕ್ಕೆ ಒದಗಿಸುವ ಗುತ್ತಿಗೆ ಕಾರ್ಮಿಕರಿಗೆ ಸಂಬಂಧಿಸಿದ,

A. Form No: XVI ಮತ್ತು XVIIರ ಮಾದರಿಯಲ್ಲಿ ಮಸ್ಟರ್ ರೋಲ್ ಮತ್ತು ವೇಜಸ್ ರಿಜಿಸ್ಟರ್

B. Form No: XIX ರ ಮಾದರಿಯಲ್ಲಿ Wage Slip

C. Form No: XX ರ ಮಾದರಿಯಲ್ಲಿ Register of deduction

D.Form No: XXI ರ ಮಾದರಿಯಲ್ಲಿ Register of Fines if any

E. Form No: XXII ರ ಮಾದರಿಯಲ್ಲಿ Register of advance if any

F. Form No: XXIII ರ ಮಾದರಿಯಲ್ಲಿ Register of over time if anyಇವುಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು ಮತ್ತು 03 ತಿಂಗಳಿಗೊಮ್ಮೆ ಪರಿಶೀಲನೆಗಾಗಿ ಸಲ್ಲಿಸಬೇಕು.

G. ವಾರ್ಷಿಕ ಭವಿಷ್ಯನಿಧಿ ಪಾವತಿಗೆ ಸಂಬಂಧಿಸಿದಂತೆ ಭವಿಷ್ಯನಿಧಿ ಕಚೇರಿಯಿಂದ ಧೃಡೀಕರಿಸಲ್ಪಟ್ಟ 3-A ನಮೂನೆಯನ್ನು ಪ್ರತಿ ವರ್ಷದ ಏಪ್ರಿಲ್ 30 ರೊಳಗೆ ಗುತ್ತಿಗೆದಾರರು ಕಡ್ಡಾಯವಾಗಿ ಈ ಕಚೇರಿಗೆ ಸಲ್ಲಿಸಬೇಕು.

3.5 ನೌಕರರ ರಾಜ್ಯ ವಿಮೆ ಕಾಯ್ದೆ 1948 ಹಾಗೂ ಭವಿಷ್ಯನಿಧಿ ಮತ್ತು ಸಂಕೀರ್ಣ ಉಪಬಂಧಗಳ ಕಾಯ್ದೆ 1952 ರನ್ವಯ ಇ.ಎಸ್.ಐ. ಹಾಗೂ ಪಿ.ಎಫ್. ಕಛೇರಿಗೆ ಒಕ್ಕೂಟ ಹಾಗೂ ಘಟಕಗಳಲ್ಲಿ ಕಾರ್ಯನಿರ್ವಹಿಸಿದ ಕಾರ್ಮಿಕರುಗಳಿಗೆ ಸಂಬಂಧಿಸಿದಂತೆ ಪಾವತಿಸಲಾದ ಮೊತ್ತಕ್ಕೆ ಸಂಬಂಧಿಸಿದಂತೆ ಪಾವತಿಸಲಾದ ವೇತನ, ಪಿ.ಎಫ್. ವಂತಿಗೆ ಹಾಗೂ ಇ.ಎಸ್.ಐ ವಂತಿಗೆ ವಿವರಗಳನ್ನೊಳಗೊಂಡ ಇ.ಎಸ್.ಐ ಫಾರಂ–7 Extract ಹಾಗೂ ಮಾಸಿಕ ಪಿ.ಎಫ್. ಪಾವತಿ ಪಟ್ಟಿ Extract ನಿಗದಿತ ನಮೂನೆಯಲ್ಲಿ / ಶೆಡ್ಯೂಲ್‌ನಲ್ಲಿ ದೃಢೀಕರಿಸಿ ಕಡ್ಡಾಯವಾಗಿ ಸಲ್ಲಿಸತಕ್ಕದು.

3.6 ಗುತ್ತಿಗೆದಾರರು ತಾವು ಒಕ್ಕೂಟದ ಕೆಲಸಕಾರ್ಯಗಳಿಗೆ ನೀಡುವ ಗುತ್ತಿಗೆ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಶಾಸನಬದ್ಧ ಪಿ.ಎಫ್. ವಂತಿಗೆಗಳು (ಗುತ್ತಿಗೆ ಕಾರ್ಮಿಕರ + ಉದ್ಯೋಗದಾರರ) ಇ.ಎಸ್.ಐ ವಂತಿಗೆಗಳು (ಗುತ್ತಿಗೆ ಕಾರ್ಮಿಕರ + ಉದ್ಯೋಗದಾತನ ವಂತಿಗೆಗಳು) ಪತ್ರಿ ತಿಂಗಳು ನಿಗದಿತ ದಿನಾಂಕದೊಳಗೆ ಹಿಂದಿನ ಮಾಹೆಯ ಪಿ.ಎಫ್. ಮತ್ತು ಇ.ಎಸ್.ಐ ಪ್ರಾಧಿಕಾರಗಳಿಗೆ ಕಾನೂನುಬದ್ಧವಾಗಿ ಪಾವತಿಸಿ ಸಂಬಂಧಿತ ಚಲನ್‌ಗಳನ್ನು ಒಕ್ಕೂಟಕ್ಕೆ ಸಂಬಂಧಿಸಿದಂತೆ ದೃಢೀಕರಿಸಿ ಒಕ್ಕೂಟಕ್ಕೆ ಪತ್ರಿ ತಿಂಗಳು ಬಿಲ್ಲಿನ ಜೊತೆ ಕಾರ್ಮಿಕ ಪಟ್ಟಿಯೊಂದಿಗೆ ಲಗತ್ತಿಸತಕ್ಕದ್ದು.

3.7 ಗುತ್ತಿಗೆದಾರರು ವರ್ಷದ ಕೊನೆಗೆ ಭವಿಷ್ಯ ನಿಧಿ ಇಲಾಖೆಯಿಂದ ಪಡೆದ ಭವಿಷ್ಯ ನಿಧಿ ಪಟ್ಟಿಯನ್ನು (ಫಾರಂ.ನಂ.23) ಕೆಲಸಕ್ಕೆ ನಿಯೋಜಿಸಿದ ಗುತ್ತಿಗೆ ಕಾರ್ಮಿಕರಿಗೆ ನೀಡುವುದು.

3.8 ಗುತ್ತಿಗೆ ಕಾರ್ಮಿಕರಿಗೆ ಮಾಸಿಕ ವೇತನವನ್ನು ಕಡ್ಡಾಯವಾಗಿ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡುವ ಮೂಲಕ ಪಾವತಿಸತಕ್ಕದು.

3.9 ಗುತ್ತಿಗೆದಾರರು ಡಿಮಾಂಡ್ ಡ್ರಾಫ್ಟ್ ಇತರೆ ರೂಪದಲ್ಲಿ ಬಿಲ್ಲಿನ ಮೊಬಲಗನ್ನು ಪಡೆಯಲು ಇಚ್ಚಿಸಿದಲ್ಲಿ ಅಂತಹ ಸಂದರ್ಭಗಳಲ್ಲಿ ತಗಲುವ ವೆಚ್ಚವನ್ನು ಗುತ್ತಿಗೆದಾರರು ಭರಿಸಬೇಕಾಗುತ್ತದೆ.

3.10 ಮಾನವ ದಿನಗಳ ಗುತ್ತಿಗೆ ಆಧಾರದ ಮೇಲೆ ಒದಗಿಸಿದ ಗುತ್ತಿಗೆ ಕಾರ್ಮಿಕರ ಹಾಜರಾತಿಯನ್ನು ವೇಳಾ ಕಛೇರಿ ವಿಭಾಗದಲ್ಲಿ ಪ್ರತಿ ಪಾಳಿಯಲ್ಲಿ ಪ್ರತ್ಯೇಕ ರಿಜಿಸ್ಟರ್‌ನಲ್ಲಿ ದಾಖಲಿಸಬೇಕು ಹಾಗೂ ಸಂಬಂಧಿಸಿದ ವಿಭಾಗದಲ್ಲಿಯೂ ಪ್ರತ್ಯೇಕ ರಿಜಿಸ್ಟರ್‌ನಲ್ಲಿ ಸಹ ದಾಖಲಿಸಬೇಕು.

3.11 ಗುತ್ತಿಗೆ ಕಾರ್ಮಿಕರಿಗೆ ಪ್ರತಿ ಮಾಹೆಯ ನಿಗದಿತ ತಾರೀಖಿನೊಳಗೆ ವೇತನವನ್ನು ಬ್ಯಾಂಕ್ ಮೂಲಕ ಪಾವತಿಸಿ, ವೇತನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಗೂ ಸಂಬಂಧಪಟ್ಟ ವಿಭಾಗಗಳ ಹಾಜರಾತಿ ದೃಡೀಕರಣದೊಂದಿಗೆ ಬಿಲ್ಲನ್ನು ಪಾವತಿಗಾಗಿ ಸಲ್ಲಿಸುವುದು.

3.12 ತಮ್ಮ ಕಾರ್ಮಿಕರಿಗೆ ಗುಣಮಟ್ಟದ ಎರಡು ಜೊತೆ ಸಮವಸ್ತ್ರವನ್ನು ಹಾಗೂ ಒಂದು ಜೊತೆ ಶೂ ವಿತರಿಸುವುದು ಹಾಗೂ ಪ್ರತಿಯೊಬ್ಬ ಕಾರ್ಮಿಕರಿಗೂ, ಇ.ಪಿ.ಎಫ್ ಸಂಖ್ಯೆ ಹೊಂದಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ವಿತರಿಸಬೇಕು ಹಾಗೂ ಪ್ರತಿ ಸಿಬ್ಬಂದಿಯು ಕರ್ತವ್ಯಕ್ಕೆ ಹಾಜರಾದಾಗ, ಸದರಿ ಕಾರ್ಡಗಳನ್ನು ಕಡ್ಡಾಯವಾಗಿ ಧರಿಸುವಂತೆ ಕ್ರಮವಿಡಬೇಕು. ಗುತ್ತಿಗೆ ಕಾರ್ಮಿಕರಿಗೆ ಕಡ್ಡಾಯವಾಗಿ ಮಾಹೆಯಾನ ವೇತನಪಟ್ಟಿ ವಿತರಿಸುವುದು, ಗುತ್ತಿಗೆ ಕಾರ್ಮಿಕರು ನೀಡಲಾದ ಸಮವಸ್ತ್ರ ಮತ್ತು ಶೂ ಅನ್ನು ಕಡ್ಡಾಯವಾಗಿ ಧರಿಸಿಕೊಂಡು ಹಾಜರಾಗುವಂತೆ ಸೂಚಿಸುವುದು.

3.13 ಸಮವಸ್ತ್ರದ ಮೇಲೆ ಕಡ್ಡಾಯವಾಗಿ ಗುತ್ತಿಗೆದಾರರ ಹೆಸರು / ಲೊಗೋವನ್ನು ಮುದ್ರಿಸಿರಬೇಕು.

3.14 ಗುತ್ತಿಗೆದಾರರು ಪ್ರತಿ ತಿಂಗಳು ವಿಭಾಗದ ಮುಖ್ಯಸ್ಥರ ದೃಢೀಕರಣದೊಂದಿಗೆ ಬಿಲ್ಲನ್ನು ಸೂಚಿತ ದಿನಾಂಕದೊಳಗಾಗಿ ನಿಗದಿಪಡಿಸಿದ ನಮೂನೆಯಲ್ಲಿ ದ್ವಿಪ್ರತಿಯಲ್ಲಿ ಒಕ್ಕೂಟಕ್ಕೆ ಸಲ್ಲಿಸಬೇಕು. ಸದರಿ ಬಿಲ್ಲಿನ ಮೊತ್ತದಲ್ಲಿ ಆದಾಯ ತೆರಿಗೆಯ (T.D.S) ಕಟಾವಣೆ ಒಳಗೊಂಡು ಎಲ್ಲಾ ಶಾಸನಬದ್ಧ ಕಟಾವಣೆ ಮತ್ತು ಒಕ್ಕೂಟಕ್ಕೆ ಬರಬೇಕಾದ ಮೊತ್ತ ಹಾಗೂ ವಿಧಿಸಬಹುದಾದ ದಂಡಗಳ ಕಟಾವಣೆ ಮಾಡಿ ಉಳಿಕೆ ಮೊತ್ತವನ್ನು ಚೆಕ್ ಮುಖೇನ ಗುತ್ತಿಗೆದಾರರಿಗೆ ಪಾವತಿಸಲಾಗುವುದು.

3.15 ಗುತ್ತಿಗೆದಾರರು ಒಕ್ಕೂಟದಲ್ಲಿ ಗುತ್ತಿಗೆಯನ್ನು ನಿರ್ವಹಿಸುವ ಅವಧಿಯಲ್ಲಿ ಒಕ್ಕೂಟದಿಂದ ಪಡೆಯುವ ಅಥವಾ ಲಭ್ಯವಾಗುವ ಹಾಲು ಮತ್ತು ಹಾಲಿನ ಉತ್ಪನ್ನಗಳ ಉತ್ಪಾದನೆ, ಮಾರಾಟ/ಮಾರುಕಟ್ಟೆ, ಒಕ್ಕೂಟದ ವ್ಯವಹಾರ ನಿರ್ವಹಣೆಗೆ ಸಂಬಂಧಿಸಿದ ಲಿಖಿತ ಮತ್ತು ಮೌಖಿಕ ಮಾಹಿತಿಯನ್ನು ಯಾರಿಗೂ ಬಯಲು ಮಾಡಬಾರದು ಮತ್ತು ಅಂತಹ ಮಾಹಿತಿಯ ರಹಸ್ಯವನ್ನು ಕಾಪಾಡಬೇಕು.

3.16 ಗುತ್ತಿಗೆ ಅವಧಿಯಲ್ಲಿ ಸರ್ಕಾರವು ಕಾಲಕಾಲಕ್ಕೆ ಪರಿಷ್ಕರಿಸುವ ಕನಿಷ್ಟ ವೇತನವನ್ನು, ಕಾಯಿದೆ 1948ರಡಿಯಲ್ಲಿ ಸರ್ಕಾರಿ ಪ್ರಕಟಣೆ ಸಂಖ್ಯೆLD:158:LMW:93ದಿನಾಂಕ:16.11.1996 ಯಲ್ಲಿ ಹಾಲು ಶೇಖರಣೆ, ಸಂಸ್ಕರಣೆ ಮತ್ತು ವಿತರಣೆ ಗುತ್ತಿಗೆಯಲ್ಲಿ ಕೆಲಸದಲ್ಲಿ

ತೊಡಗಿರುವ ಕೆಲಸಗಾರರಿಗೆ ನಿಗದಿಪಡಿಸಿರುವ ಕನಿಷ್ಠ ವೇತನ ಮಜೂರಿ ಹಾಗೂ ಕಾಲಕಾಲಕ್ಕೆ ಪರಿಷ್ಕರಿಸಲಾಗುವ ತುಟ್ಟಿ ಭತ್ಯೆಯನ್ನು ಪಾವತಿಸಲು ಗುತ್ತಿಗೆದಾರರು ಬದ್ಧರಿರಬೇಕು.

3.17 ಗುತ್ತಿಗೆ ಕೆಲಸಗಾರರಿಂದ ಪ್ರತಿ ದಿನ 8 ಗಂಟೆಗಳಿಗೂ ಹೆಚ್ಚು ಅವಧಿಯ ಕೆಲಸವನ್ನು ಮಾಡಿಸಬಾರದು. ಮಹಿಳಾ ಕೆಲಸಗಾರರನ್ನು ಮುಂಜಾನೆ 06 ಗಂಟೆಗಿಂತ ಮೊದಲು ಹಾಗೂ ಸಂಜೆ 07 ಗಂಟೆಯ ನಂತರ ಪಾಳಿಯಲ್ಲಿ ನಿಯೋಜಿಸಬಾರದು. ಕಡ್ಡಾಯವಾಗಿ ವೇತನದೊಂದಿಗೆ ವಾರದ ರಜೆ, ರಾಷ್ಟ್ರೀಯ ಮತ್ತು ಹಬ್ಬಗಳ (ಸಾರ್ವತ್ರಿಕ) ರಜೆ ಹಾಗೂ ಗಳಿಕೆ ರಜೆ ನೀಡಬೇಕು. ಇಲ್ಲದಿದ್ದಲ್ಲಿ ಕಾನೂನಿನ್ವಯ ರಜಾ ವೇತನ ಮತ್ತು ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ನೀಡಬೇಕು. ಗುತ್ತಿಗೆದಾರರು ಒದಗಿಸುವ ಕೆಲಸಗಾರರಿಗೆ ಭವಿಷ್ಯ ನಿಧಿ, ನೌಕರರ ವಿಮಾ ವಂತಿಗೆ, ಮತ್ತು ಆಡಳಿತಾತ್ಮಕ ವೆಚ್ಚ ಒಳಗೊಂಡು ಎಲ್ಲಾ ಖರ್ಚುಗಳನ್ನು ಭರಿಸಿ ಶಾಸನಾತ್ಮಕ ಸೌಲಭ್ಯಗಳನ್ನು ನೀಡಬೇಕು. ಗುತ್ತಿಗೆದಾರರು ತಾವು ನಿಯೋಜಿಸುವ ಕೆಲಸಗಾರರಿಗೆ ಬೋನಸ್ ಹಾಗೂ ಉಪಧನ(Gratuity) ಪಾವತಿ ಬಗ್ಗೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಜವಾಬ್ದಾರರಾಗಿರುತ್ತಾರೆ. ಗುತ್ತಿಗೆ ಕೆಲಸಗಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ಸಹಜ ನ್ಯಾಯದ ನಿಯಮಗಳನ್ನು ಗುತ್ತಿಗೆದಾರರು ಅನುಸರಿಸಬೇಕು.

3.18 ಒಕ್ಕೂಟದ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಸಂಭವಿಸಬಹುದಾದ ಯಾವುದೇ ಅಪಘಾತಗಳಿಂದ ಗುತ್ತಿಗೆದಾರರು ನಿಯೋಜಿಸುವ ಕೆಲಸಗಾರರಿಗೆ ಊನ ಅಥವಾ ಅಂಗಹೀನತೆ ಉಂಟಾದಲ್ಲಿ ಅಥವಾ ಸಾವು ಸಂಭವಿಸಿದಲ್ಲಿ ಗುತ್ತಿಗೆದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ ಹಾಗೂ ಸಂಬಂಧಿಸಿದ ಕಾನೂನು/ನಿಯಮಗಳಲ್ಲಿ ಸೂಚಿಸಿದಂತೆ ಈ ಬಗ್ಗೆ ತಗಲುವ ವೆಚ್ಚ / ಸೌಲಭ್ಯಗಳನ್ನು ಮತ್ತು ಪರಿಹಾರವನ್ನು ಪಾವತಿಸಲು ಗುತ್ತಿಗೆದಾರರೇ ಹೊಣೆಯಾಗಿರುತ್ತಾರೆ.

3.19 ಗುತ್ತಿಗೆದಾರರು ಒದಗಿಸುವ ಕೆಲಸಗಾರರು ಇತರ ಯಾವುದೇ ಸಂಸ್ಥೆಗಳಲ್ಲಿ ಕೆಲಸವನ್ನು ನಿರ್ವಹಿಸುತ್ತಿರಬಾರದು ಹಾಗೂ ಒಕ್ಕೂಟದ ಹಿತಾಸಕ್ತಿಗೆ ಮಾರಕವಾಗುವ ಯಾವುದೇ ತರದ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರಬಾರದು. ಒಕ್ಕೂಟದ ಆವರಣದ ಒಳಗೆ ಮತ್ತು ಹೊರಗೆ ಗುತ್ತಿಗೆ ಕೆಲಸಗಾರರ ಕೃತ್ಯಗಳಿಗೆ ಗುತ್ತಿಗೆದಾರರೇ ಹೊಣೆಗಾರರು. ಅದರಿಂದ ಒಕ್ಕೂಟಕ್ಕೆ ನಷ್ಟವಾದಲ್ಲಿ ಗುತ್ತಿಗೆದಾರರೇ ಭರಿಸಬೇಕಾಗುತ್ತದೆ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ರೀತಿಯಲ್ಲಿ ಒಕ್ಕೂಟದ ಹಿತಾಸಕ್ತಿಗೆ ಧಕ್ಕೆಯಾಗದಂತೆ ಗುತ್ತಿಗೆದಾರರು ಕಾರ್ಯ ನಿರ್ವಹಿಸಬೇಕು. ತಪ್ಪಿದ್ದಲ್ಲಿ ಗುತ್ತಿಗೆಯನ್ನು ರದ್ದುಪಡಿಸುವ ಅಧಿಕಾರ ಒಕ್ಕೂಟಕ್ಕೆ ಇರುತ್ತದೆ.

3.20 ಗುತ್ತಿಗೆದಾರರು ಒಕ್ಕೂಟದ ಆಸ್ತಿಯನ್ನು ಜಾಗರೂಕತೆಯಿಂದ ರಕ್ಷಿಸಿ ಕಾಪಾಡಬೇಕು ಮತ್ತು ಯಾವುದೇ ಹಾನಿಕರ/ ಒಕ್ಕೂಟಕ್ಕೆ ನಷ್ಠ/ ಅಹಿತಕರ ಘಟನೆ ಸಂಭವಿಸದಂತೆ ಜಾಗ್ರತೆ ವಹಿಸಬೇಕು. ಗುತ್ತಿಗೆದಾರರು ಒದಗಿಸಿರುವ ಕೆಲಸಗಾರರ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿಯಿಂದ ಅಥವಾ ಉದ್ದೇಶಪೂರ್ವಕವಾಗಿ ಒಕ್ಕೂಟಕ್ಕೆ ನಷ್ಟ ಉಂಟಾದಲ್ಲಿ ಕಳವು ಆದಲ್ಲಿ, ವಸ್ತುಗಳು ತುಂಡಾದಲ್ಲಿ ಅವುಗಳ ಪೂರ್ಣ ಮೊತ್ತವನ್ನು ಒಕ್ಕೂಟಕ್ಕೆ ಭರಿಸಲು ಗುತ್ತಿಗೆದಾರರೇ ಬದ್ಧರಿರಬೇಕು. ಹಾಗೂ ಹೀಗೆ ಆಗುವ ನಷ್ಟವನ್ನು ದಂಡದೊಂದಿಗೆ ಮಾಹೆಯಾನ ಬಿಲ್ಲು / ಭದ್ರತಾ ಠೇವಣಿಯಲ್ಲಿ ಕಟಾಯಿಸಲಾಗುವುದು. ಗುತ್ತಿಗೆದಾರರು ತಮಗೆ ವಹಿಸಿದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಪಡೆಯುವ ಕೆಲಸಗಾರರು ಗುತ್ತಿಗೆದಾರರ ನೌಕರರಾಗಿದ್ದು, ಯಾವಾಗಲು ಗುತ್ತಿಗೆದಾರರ ನೇರ, ಅನನ್ಯ (exclusive) ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟಿರುತ್ತಾರೆ. ಗುತ್ತಿಗೆದಾರರು ಗುತ್ತಿಗೆಯಡಿ ತಮಗಿರುವ ಬಾಧ್ಯತೆಗಳನ್ನು ಪೂರೈಸಲು ಕೆಲಸಗಾರರ ರಜಾ ಅವಧಿಯ ಬದಲಿ ವ್ಯವಸ್ಥೆಗೆ ಒಳಗೊಂಡು ಯಾವಾಗಲೂ ಅವಶ್ಯವಿರುವಷ್ಟು ಕನಿಷ್ಠ ಕೆಲಸಗಾರರನ್ನು ಕೆಲಸಕ್ಕೆ ನಿಯೋಜಿಸುವುದು ಮತ್ತು ಸದರಿ ಕೆಲಸಗಾರರು ಗುತ್ತಿಗೆದಾರರ ಬಾಧ್ಯತೆಗಳನ್ನು ಪೂರೈಸುವಂತೆ ಖಾತರಿಪಡಿಸುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ನಿಗದಿಪಡಿಸಿರುವ ಕನಿಷ್ಠ ಕೆಲಸಗಾರರನ್ನು ಒದಗಿಸದಿದ್ದಲ್ಲಿ ಸೂಕ್ತ ದಂಡ ವಿಧಿಸಲಾಗುವುದು.

3.21 ಯಾವುದೇ ಕಾರಣಕ್ಕೂ ಗುತ್ತಿಗೆ ಕೆಲಸಗಾರರು ಒಕ್ಕೂಟದ ನೌಕರರಲ್ಲ. ಆದ್ದರಿಂದ ಗುತ್ತಿಗೆ ಕೆಲಸಗಾರರ ತಪ್ಪು ಒಪ್ಪುಗಳಿಗೆ ಗುತ್ತಿಗೆದಾರರೇ ಜವಾಬ್ದಾರರು. ಒಕ್ಕೂಟ ಮತ್ತು ಗುತ್ತಿಗೆದಾರರು / ಗುತ್ತಿಗೆ ಕೆಲಸಗಾರರು ಇವರುಗಳ ಮಧ್ಯೆ ಯಾವುದೇ ರೀತಿಯಲ್ಲಿ ಏನೇ ಆದರೂ ಮಾಲೀಕ – ನೌಕರ ಸಂಬಂಧವಿರುವುದಿಲ್ಲ ಮತ್ತು ಗುತ್ತಿಗೆದಾರರು ಸ್ವತಂತ್ರ ಏಜನ್ಸಿಯಾಗಿ ತಮ್ಮ ವ್ಯವಹಾರವನ್ನು ನಿರ್ವಹಿಸಬೇಕಾಗಿದ್ದು, ಈ ವಾಸ್ತವಾಂಶವನ್ನು ತಾವು ಕೆಲಸಕ್ಕೆ ನಿಯೋಜಿಸುವ ಎಲ್ಲರಿಗೂ ಸ್ಪಷ್ಟಪಡಿಸಬೇಕಾಗುತ್ತದೆ.

3.22 ಗುತ್ತಿಗೆ ಅವಧಿಯು ಗುತ್ತಿಗೆ ಮಂಜೂರಾದ ದಿನಾಂಕದಿಂದ ಎರಡು ವರ್ಷಗಳಾದ್ದಾಗಿದ್ದು, ಇದನ್ನು 06 ತಿಂಗಳು ಅಥವಾ ಒಕ್ಕೂಟದ ಅಗತ್ಯ ಅನುಸಾರ ವಿಸ್ತರಿಸಿಕೊಳ್ಳುವ ಅಧಿಕಾರವನ್ನು ಒಕ್ಕೂಟವು ಕಾಯ್ದಿರಿಸಿಕೊಂಡಿದೆ. ಈ ಅವಧಿಯಲ್ಲಿ ಗುತ್ತಿಗೆದಾರರ ಕೆಲಸ ಕಾರ್ಯಗಳು ತೃಪ್ತಿಕರ / ಸಮರ್ಪಕವಾಗಿಲ್ಲದಿದ್ದಲ್ಲಿ ಒಕ್ಕೂಟವು ಮೂರು ದಿನಗಳ ಲಿಖಿತ ಕಾರಣ – ಕೇಳಿ – ನೋಟೀಸ್ ನೀಡಿ ಅದಕ್ಕೆ ಗುತ್ತಿಗೆದಾರರು ನೀಡುವ ವಿವರಣೆ / ಸಮಜಾಯಿಷಿಕೆ ಒಕ್ಕೂಟಕ್ಕೆ ತೃಪ್ತಿಕರವಾಗಿ ಕಂಡು ಬಾರದಿದ್ದಲ್ಲಿ ಗುತ್ತಿಗೆಯನ್ನು ರದ್ದುಪಡಿಸುವ ಹಾಗೂ (ಬ್ಯಾಂಕ್ ಗ್ಯಾರಂಟಿಯನ್ನು ನಗದೀಕರಿಸಿ) ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ಒಕ್ಕೂಟವು ಕಾದಿರಿಸಿಕೊಂಡಿರುತ್ತದೆ.

3.23 ಒಕ್ಕೂಟದ ಆವರಣದಲ್ಲಿ ಒಕ್ಕೂಟವು ವಹಿಸಿರುವ ಗುತ್ತಿಗೆ ಕೆಲಸವನ್ನು ಮಾತ್ರ ನಿರ್ವಹಿಸಲು ಗುತ್ತಿಗೆದಾರರು ಮತ್ತು ಅವರ ಕೆಲಸಗಾರರಿಗೆ ಅವಕಾಶ ನೀಡಲಾಗಿದ್ದರೂ ಒಕ್ಕೂಟದ ಆವರಣದ ಮೇಲೆ ಗುತ್ತಿಗೆದಾರರಿಗೆ ಯಾವುದೇ ಹಕ್ಕು, ಸ್ವಾಮ್ಯ ಅಥವಾ ಧಾರಣಾಧಿಕಾರ (right, title or lien) ಇರುವುದಿಲ್ಲ. ಗುತ್ತಿಗೆದಾರರು ಮತ್ತು ಅವರ ಕೆಲಸಗಾರರು ಒಕ್ಕೂಟದ ವಿವೇಚನೆಯ ಮೇರೆಗೆ ಒಕ್ಕೂಟದ ಆವರಣವನ್ನು ತೆರವುಗೊಳಿಸಿ ಹೊರಹೋಗಬೇಕು. ಗುತ್ತಿಗೆದಾರರು ಅಥವಾ ಗುತ್ತಿಗೆದಾರರ ಕೆಲಸಗಾರರಿಂದ ಒಕ್ಕೂಟದ ಕೆಲಸ ಕಾರ್ಯಗಳಿಗೆ ತೊಂದರೆ ಉಂಟು ಮಾಡುವ ಬೆದರಿಕೆಯಿಂದಾಗಿ ಕೈಗಾರಿಕಾ ಸಂಬಂಧದ ಸಮಸ್ಯೆ ಉದ್ಭವಿಸಿದಲ್ಲಿ ಗುತ್ತಿಗೆಯನ್ನು 24 ಘಂಟೆಯೊಳಗೆ ರದ್ದುಪಡಿಸಲಾಗುವುದು ಮತ್ತು ಗುತ್ತಿಗೆದಾರರು ಆ ಅವಧಿಯೊಳಗೆ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಹೊಸ ಗುತ್ತಿಗೆದಾರರಿಗೆ / ವ್ಯವಸ್ಥೆಗೆ ಅವಕಾಶವಾಗುವಂತೆ ಒಕ್ಕೂಟದ ಆವರಣವನ್ನು ತೆರವುಗೊಳಿಸಬೇಕು.

**ಟೆಂಡರುದಾರರ ಸಹಿ ಮತ್ತು ಮೊಹರು**

3.24 ಸಕಾರಣಗಳಿದ್ದಲ್ಲಿ ಗುತ್ತಿಗೆಯ ಅವಧಿಯಲ್ಲಿ ಗುತ್ತಿಗೆಯನ್ನು ರದ್ದುಗೊಳಿಸುವುದು ಅವಶ್ಯಕವೆಂದು ಕಂಡು ಬಂದಲ್ಲಿ ಯಾವುದೇ ಕಾರಣವನ್ನು ನಮೂದಿಸದೆ ಒಂದು ತಿಂಗಳ ಲಿಖಿತ ನೋಟಿಸನ್ನು ನೀಡಿ ಗುತ್ತಿಗೆಯನ್ನು ರದ್ದುಪಡಿಸುವ ಅಧಿಕಾರವನ್ನು ಒಕ್ಕೂಟವು ಕಾದಿರಿಸಿಕೊಂಡಿದೆ.

3.25 ಗುತ್ತಿಗೆದಾರರು ಒಕ್ಕೂಟದಿಂದ ನೀಡಲಾಗುವ ಗುತ್ತಿಗೆಯನ್ನು ಭಾಗಶಃ / ಪೂರ್ಣವಾಗಿ ಬೇರೆಯವರಿಗೆ ಒಳ ಗುತ್ತಿಗೆಗೆ / ಒಳಬಾಡಿಗೆಗೆ ನೀಡಬಾರದು.

3.26 ಗುತ್ತಿಗೆ ಕೆಲಸಗಾರರಿಗೆ ವಿವಿಧ ಕಾನೂನುಗಳಲ್ಲಿ ನಿಗದಿಪಡಿಸಿದ ಸೌಲಭ್ಯ ಮತ್ತು ಸವಲತ್ತುಗಳನ್ನು ನೀಡುವುದು ಗುತ್ತಿಗೆದಾರರ ಶಾಸನಬದ್ಧ ಹೊಣೆಗಾರಿಕೆಯಾಗಿದ್ದರೂ ಅವುಗಳಿಗಿಂತ ಹೆಚ್ಚಿನ ಸೌಲಭ್ಯಗಳನ್ನು ನೀಡುವುದಾದಲ್ಲಿ ಸದರಿ ವೆಚ್ಚವನ್ನು ಗುತ್ತಿಗೆದಾರರೇ ಸ್ವತಃ ಭರಿಸಬೇಕು. ಆದಾಗ್ಯೂ ಎಲ್ಲೆಲ್ಲಿ ಅನ್ವಯಿಸುವುದೋ ಅಂತಹ ಸ್ಥಳಗಳಲ್ಲಿ ಆರೋಗ್ಯ ಮತ್ತು ನೈರ್ಮಲ್ಯ ಕಾಪಾಡುವ ದೃಷ್ಟಿಯಿಂದ ಮತ್ತು ಸುರಕ್ಷಾ ಕ್ರಮಗಳ ಅನುಷ್ಠಾನಗೊಳಿಸುವಲ್ಲಿ ಒಕ್ಕೂಟವು ನೀಡುವ ಸಲಹೆ ಸೂಚನೆಗಳಂತೆ ವಸ್ತ್ರ ನೀತಿಯನ್ನು ಕಡ್ಡಾಯವಾಗಿ ಪಾಲಿಸಲು ಗುತ್ತಿಗೆದಾರರು ಜವಾಬ್ದಾರರಾಗಿರುತ್ತಾರೆ.

3.27 ಗುತ್ತಿಗೆದಾರರು ಒದಗಿಸುವ ಎಲ್ಲಾ ಕೆಲಸಗಾರರನ್ನು FSSAI ಕಾನೂನಿನ್ವಯ ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಅವರುಗಳ ಆರೋಗ್ಯ ದೃಢೀಕರಣ ಪತ್ರವನ್ನು ಪಡೆದಿರಬೇಕು ಹಾಗು ಒಕ್ಕೂಟದ ನಿರ್ದೇಶನದಂತೆ ಪ್ರತಿ ವರ್ಷ ವೈದ್ಯಕೀಯ ತಪಾಸಣೆಗೆ ಒಳಪಡಿಸಿ ದೃಡೀಕರಣ ಪತ್ರವನ್ನು ಒಕ್ಕೂಟಕ್ಕೆ ಸಲ್ಲಿಸಬೇಕು. ಮಾತ್ರವಲ್ಲದೆ ಕೆಲಸಗಾರರು ತಮ್ಮ ದೈಹಿಕ / ವಸ್ತ್ರಗಳ ಸ್ವಚ್ಛತೆಯನ್ನು ಕಾಪಾಡಿ ಮುಖ ಕ್ಷೌರ ಮಾಡಿಸಿರಬೇಕು / ತಲೆಗೂದಲು / ಉಗುರು ಕತ್ತರಿಸಿರಬೇಕು. ಕೆಲಸಗಾರರು ಎಲೆ ಅಡಿಕೆ / ಬೀಡ / ತಂಬಾಕು / ಗುಟ್ಕಾ ಮುಂತಾದ ಜಗಿಯುವ ಪದಾರ್ಥಗಳನ್ನು ಹಾಗೂ ನಶ್ಯ ಸೇವನೆ, ಧೂಮಪಾನ, ಮದ್ಯ ಸೇವನೆ ಮಾಡಿ ಕೆಲಸಕ್ಕೆ ಬರಬಾರದು ಮತ್ತು ಇವುಗಳನ್ನು ಕೆಲಸದ ಅವಧಿಯಲ್ಲಿ ಮಾಡಬಾರದು. ಗುತ್ತಿಗೆದಾರರು, ಗುತ್ತಿಗೆ ಕೆಲಸಗಾರರಿಗೆ ಸಮವಸ್ತ್ರ ಮತ್ತು ರಕ್ಷಣಾ ಸಲಕರಣೆಗಳನ್ನು ಮತ್ತು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ನೀಡತಕ್ಕದ್ದು.

3.28 ಕಾಲ ಕಾಲಕ್ಕೆ ಆಗುವ ತಿದ್ದುಪಡಿಗಳೊಂದಿಗೆ ಜಾರಿಯಲ್ಲಿರುವ ವೇತನ ಪಾವತಿ ಕಾಯಿದೆ 1936, ಕನಿಷ್ಠ ವೇತನ ಕಾಯಿದೆ 1948, ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ರದ್ದತಿ) ಕಾಯಿದೆ 1970, ನೌಕರರ ರಾಜ್ಯ ವಿಮಾ ಕಾಯಿದೆ 1923, ನೌಕರರ ಭವಿಷ್ಯ ನಿಧಿ ಮತ್ತು ಸಂಕೀರ್ಣ ಉಪ ಬಂಧಗಳ ಕಾಯಿದೆ 1952, ಬೋನಸ್ ಪಾವತಿ ಕಾಯಿದೆ 1965, ಕಾರ್ಖಾನೆ ಕಾಯಿದೆ 1948, ಉಪಧನ ಕಾಯಿದೆ 1972, ಕರ್ನಾಟಕ ಕಲ್ಯಾಣ ನಿಧಿ ಕಾಯಿದೆ 1965, ಕರ್ನಾಟಕ ಕೈಗಾರಿಕೆ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ನಿಯಮಗಳು 1963, ಆದಾಯ ವೃತ್ತಿ ಸೇವಾ ತೆರಿಗೆ ಕಾಯಿದೆ ಮುಂತಾಧ ಕೆಲಸಗಾರರು ನಿಯೋಜನೆ ಹಾಗೂ ಗುತ್ತಿಗೆ ವ್ಯವಹಾರಕ್ಕೆ ಸಂಬಂದಿಸಿದಂತೆ ಅನ್ವಹಿಸುವ ಕಾಲ ಕಾಲಕ್ಕೆ ಆಗುವ ತಿದ್ದುಪಡಿಗಳೊಂದಿಗೆ ಜಾರಿಯಲ್ಲಿರುವ ಕೇಂದ್ರ ಮತ್ತು ರಾಜ್ಯಗಳ ವಿವಧ ಕಾನೂನುಗಳು (Statutes) ಅಧಿನಿಯಮಗಳು (Acts) ನಿಯಮಗಳು (Rules) ವಿನಿಮಯಗಳು (Regulations) ಮತ್ತು ಆದೇಶಗಳು (orders) ಇವುಗಳನ್ನು ಪಾಲಿಸಲು ಗುತ್ತಿಗೆದಾರರು ಬದ್ದರಾಗಿರುತ್ತಾರೆ.

3.29 ಗುತ್ತಿಗೆದಾರರು ಅಪರಾಧ ಹಿನ್ನೆಲೆಯುಳ್ಳ, ಹಿಂದಿನ ನಡತೆ ಸರಿಯಿಲ್ಲದ ಕೆಲಸಗಾರರನ್ನು ಗುತ್ತಿಗೆದಾರರು ಒಕ್ಕೂಟದ ಕೆಲಸಕ್ಕೆ ನಿಯೋಜಿಸಬಾರದು. ಗುತ್ತಿಗೆದಾರರು ಒದಗಿಸುವ ಕೆಲಸಗಾರರು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವುದು ಕಂಡು ಬಂದಲ್ಲಿ ಅಥವಾ ನಡತೆ / ಕೆಲಸ ತೃಪ್ತಿಕರವಿಲ್ಲವೆಂದು ಒಕ್ಕೂಟವು ತಿಳಿಸಿದಲ್ಲಿ ಅಂತಹವರನ್ನು ಕೂಡಲೇ ಬದಲಾಯಿಸುವುದು. ಕೆಲಸಗಾರರು ಶಿಸ್ತಿನಿಂದ ಕಾರ್ಯ ನಿರ್ವಹಿಸುವಂತೆ ಸೂಕ್ತ ಕ್ರಮ ಕೈಗೊಳ್ಳುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ.

3.30 ಗುತ್ತಿಗೆದಾರರು ಕೆಲಸಗಾರರ ಗುರುತಿನ ಸಂಖ್ಯೆ (ID) ಯನ್ನು ನೀಡಿ ತಮ್ಮ ಕೆಲಸಗಾರರ ಭಾವಚಿತ್ರವನ್ನು ಒಳಗೊಂಡ ಗುರುತಿನ ಚೀಟಿಯನ್ನು ಮತ್ತು ಪ್ರತಿ ತಿಂಗಳು ವೇತನ ಪಟ್ಟಿಯನ್ನು ನೀಡಬೇಕು. ಹಾಜರಾತಿ ಪುಸ್ತಕ, ವೇತನ ಬಟವಾಡೆ ಪುಸ್ತಕ ಹಾಗೂ ಭಾವಚಿತ್ರದೊಂದಿಗೆ ವಿಳಾಸದ ವಿವರವನ್ನು, ಭವಿಷ್ಯ ನಿಧಿ, ರಾಜ್ಯ ನೌಕರರ ವಿಮಾ ವಂತಿಗೆಗೆ (ಫಾರಂ ನಂ–22, ಫಾರಂ ನಂ.11, ಫಾರಂ.14 ಫಾರಂ ನಂ.15) ದಾಖಲಾತಿಗಳನ್ನು ಕಾನೂನಿನಂತೆ ಇಟ್ಟುಕೊಂಡು ಅಗತ್ಯ ಬಿದ್ದಲ್ಲಿ ಶಾಸನಬದ್ಧ ಪ್ರಾಧಿಕಾರ / ಹಾಲು ಒಕ್ಕೂಟದ ಪರಿಶೀಲನೆಗೆ ಸಲ್ಲಿಸಲು ಬದ್ಧರಾಗಿರುತ್ತಾರೆ ಹಾಗೂ ಗುತ್ತಿಗೆದಾರರು ತಮ್ಮ ಸಿಬ್ಬಂದಿಯನ್ನು ಬದಲಾಯಿಸಿದಲ್ಲಿ ಅಂತವರ ಭಾವಚಿತ್ರ, ಹೆಸರು ಮುಂತಾದ ಪೂರ್ಣ ಮಾಹಿತಿಯನ್ನು ಒಕ್ಕೂಟಕ್ಕೆ ಸಲ್ಲಿಸತಕ್ಕದ್ದು.

3.31 ಗುತ್ತಿಗೆದಾರರು ಕೆಲಸಗಾರರಿಗೆ ಪಾವತಿಸುವ ವೇತನದಲ್ಲಿ ಭವಿಷ್ಯ ನಿಧಿ ಮತ್ತು ನೌಕರರ ರಾಜ್ಯ ವಿಮೆ ವಂತಿಗೆಯನ್ನು ಕಟಾಯಿಸಿ, ಹಾಗೂ ಜಿ.ಎಸ್.ಟಿ ಕಟಾಯಿಸಿ ಸಂಬಂಧಪಟ್ಟ ಇಲಾಖೆಗೆ ಮಾಲೀಕರ ವಂತಿಗೆಯೊಂದಿಗೆ ಪಾವತಿಸಲು ಬದ್ಧರಿರುತ್ತಾರೆ. ಸದರಿ ವಂತಿಗೆ ಪಾವತಿಯಲ್ಲಿ ಸುಸ್ತಿದಾರರಾದಲ್ಲಿ ಅಥವಾ ವ್ಯತ್ಯಾಸವಾದಲ್ಲಿ ದಂಡ ಒಳಗೊಂಡು ತತ್‌ಪರಿಣಾಮ ಉದ್ಭವಿಸುವ ಪರಿಣಾಮಗಳಿಗೆ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ. ಗುತ್ತಿಗೆದಾರನು ನಿಯೋಜಿಸುವ ಪ್ರತಿಯೊಬ್ಬ ಕೆಲಸಗಾರರಿಗೆ ಸಂಬಂಧಿಸಿದ ಹಿಂದಿನ ತಿಂಗಳ ಭವಿಷ್ಯ ನಿಧಿ ಮತ್ತು ನೌಕರರ ರಾಜ್ಯ ವಿಮೆ ವಂತಿಗೆಯನ್ನು ಹಾಗೂ ಜಿ.ಎಸ್.ಟಿ.ಯನ್ನು ಸಂಬಂಧಪಟ್ಟ ಇಲಾಖೆಗೆ ಪಾವತಿಸುವ ಬಗ್ಗೆ ದಾಖಲಾತಿಗಳನ್ನು (challan) ಒಕ್ಕೂಟಕ್ಕೆ ಸಂಬಂಧಿಸಿದ ಪ್ರತಿ ತಿಂಗಳ ಬಿಲ್ಲಿನೊಂದಿಗೆ ಕಡ್ಡಾಯವಾಗಿ ಲಗತ್ತಿಸಬೇಕು ಮತ್ತು ವೇತನ ಪುಸ್ತಕವನ್ನು ಪರಿಶೀಲನೆಗೆ ಹಾಜರುಪಡಿಸಿಬೇಕು. ನಿಗದಿಪಡಿಸಲಾದ ಸಮಯಕ್ಕೆ ರಿಟರ್ನ್ಸ್ ಆಫ್ ಕಾಂಟ್ರೂಬ್ಯೂಷನ್ ಸಂಪೂರ್ಣ ನೌಕರರ ಪಟ್ಟಿಯನ್ನು ಒಕ್ಕೂಟಕ್ಕೆ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಬಿಲ್ಲುಗಳನ್ನು ಪಾವತಿಸಲಾಗುವುದಿಲ್ಲ. ಅನಿವಾರ್ಯ ಸಂದರ್ಭಗಳಲ್ಲಿ ಭವಿಷ್ಯ ನಿಧಿ ಮತ್ತು ನೌಕರರ ರಾಜ್ಯ ವಿಮಾ ದೇಣಿಗೆಯನ್ನು ಗುತ್ತಿಗೆದಾರರ ಬಿಲ್ಲಿನಲ್ಲಿ ಕಟಾಯಿಸಿ ಸಂಬಂಧಿಸಿದವರಿಗೆ ಪಾವತಿಸಲು ಒಕ್ಕೂಟವು ಅಧಿಕಾರವನ್ನು ಹೊಂದಿರುತ್ತದೆ.

3.32 ಗುತ್ತಿಗೆದಾರರು ನಿಯೋಜಿಸುವ ಪ್ರತಿ ಒಬ್ಬ ಕೆಲಸಗಾರರಿಗೆ ಸಂಬಂಧಿಸಿದಂತೆ ಹಿಂದಿನ ತಿಂಗಳ ಭವಿಷ್ಯ ನಿಧಿ ಮತ್ತು ನೌಕರರ ರಾಜ್ಯ ವಿಮೆ ವಂತಿಗೆಯನ್ನು ಸಂಬಂಧಪಟ್ಟ ಇಲಾಖೆಗೆ ಪಾವತಿಸಿರುವ ಬಗ್ಗೆ ದಾಖಲಾತಿಗಳನ್ನು (challan) ಪ್ರತಿ ತಿಂಗಳ ಬಿಲ್ಲಿನೊಂದಿಗೆ

ಕಡ್ಡಾಯವಾಗಿ ಲಗತ್ತಿಸಿರಬೇಕು ಮತ್ತು ವೇತನದ ಪುಸ್ತಕವನ್ನು ಪರಿಶೀಲನೆಗೆ ಹಾಜರುಪಡಿಸಬೇಕು. ಇಲ್ಲದಿದ್ದಲ್ಲಿ ಬಿಲ್ಲು ಪಾವತಿಸಲಾಗುವುದಿಲ್ಲ.

3.33 ಒಕ್ಕೂಟವು ವಹಿಸಿರುವ ಕೆಲಸವನ್ನು ಸಂಬಂಧಿಸಿದ ಅಧಿಕಾರಿಗಳ ಸೂಚನೆಯಂತೆ ನಿರ್ವಹಿಸುವುದು. ಗುತ್ತಿಗೆ ಕೆಲಸಗಾರರು ಕೆಲಸವಿರುವಾಗ ಮಾತ್ರ ಒಕ್ಕೂಟದ ಆವರಣವನ್ನು ಪ್ರವೇಶಿಸುವುದು ಮತ್ತು ಕೆಲಸ ಇಲ್ಲದ ಅವಧಿಯಲ್ಲಿ ಡೈರಿ ಆವರಣದಲ್ಲಿ ಇರಬಾರದು. ಒಕ್ಕೂಟದ ಆವರಣದ ಒಳಗೆ ಬರುವಾಗ ಮತ್ತು ಹೊರಗೆ ಹೋಗುವಾಗ ಭದ್ರತಾ ವಿಭಾಗ / ಅಧಿಕಾರಿಗಳ ತಪಾಸಣೆಗೆ ಒಳಪಡಬೇಕು.

3.34 ಒಕ್ಕೂಟವು ಗುತ್ತಿಗೆದಾರರಿಗೆ ವಹಿಸಿದ ಗುತ್ತಿಗೆಯನ್ನು ಒಕ್ಕೂಟದ ಸೂಚನೆಗಳಂತೆ ನಿರ್ವಹಿಸಲು ಗುತ್ತಿಗೆದಾರರು ನಿಯುಕ್ತಿಗೊಳಿಸುವ ಕೆಲಸಗಾರರ ಒಟ್ಟು ಸಂಖ್ಯೆ ಬಗ್ಗೆ ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ರದ್ಧತಿ) ಕಾಯಿದೆಯಲ್ಲಿ ನಮೂದಿಸಿರುವ ರೀತ್ಯಾ ನಮೂನೆVI ರಲ್ಲಿ ಗುತ್ತಿಗೆ ಕಾರ್ಮಿಕ ಪರವಾನಗಿಯನ್ನು ಗುತ್ತಿಗೆ ಪಡೆದ 15 ದಿನಗಳೊಳಗೆ ಸಕ್ಷಮ ಪ್ರಾಧಿಕಾರದಿಂದ ಪಡೆದು ಒಕ್ಕೂಟಕ್ಕೆ ಸಲ್ಲಿಸಬೇಕು. ನಿಯೋಜಿಸುವ ಕೆಲಸಗಾರರ ಸಂಖ್ಯೆಯಲ್ಲಿ ಮಾರ್ಪಾಟು ಆದಲ್ಲಿ ಗುತ್ತಿಗೆ ಕಾರ್ಮಿಕ ಪರವಾನಗಿಯಲ್ಲಿ ಸೂಕ್ತ ತಿದ್ದುಪಡಿ ಮಾಡಿಸಿ ಒಕ್ಕೂಟಕ್ಕೆ ಸಲ್ಲಿಸಬೇಕು. ಗುತ್ತಿಗೆ ಅವಧಿಯಲ್ಲಿ ಸದರಿ ಪರವಾನಗಿಯಲ್ಲಿ ನಮೂದಿಸಿರುವ ಕೆಲಸಗಾರರ ಸಂಖ್ಯೆಯು ಒಕ್ಕೂಟದಲ್ಲಿ ಸಂಬಂಧಿಸಿದ ಗುತ್ತಿಗೆದಾರರ ಅಡಿಯಲ್ಲಿ ಕೆಲಸ ನಿರ್ವಹಿಸುವ ಗುತ್ತಿಗೆ ಕೆಲಸಗಾರರ ಒಟ್ಟು ಸಂಖ್ಯೆಗೆ ಎಲ್ಲಾ ಸಂದರ್ಭಗಳಲ್ಲಿ ತಪ್ಪದೇ ತಾಳೆಯಾಗಬೇಕು.

